ಮಕ್ಕಳು ನೀಡಿದ ಶಿಕ್ಷೆ

ನಾ. ಡಿಸೋಜ

ಚಿತ್ರಗಳು

ಪಾರ್ಥ ಸೇನಗುಪ್ತ



ನೆಹರೂ ಬಾಲ ಪುಸ್ತಕಾಲಯ

ಮಕ್ಕಳು ನೀಡಿದ ಶಿಕ್ಷೆ

ನಾ. ಡಿಸೋಜ

ಚಿತ್ರಗಳು:

ಪಾರ್ಥ ಸೇನಗುಪ್ತ

nbt.india
एकः सूते सकलम्

ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

ISBN 978-81-237-4550-3

ಮೊದಲ ಮುದ್ರಣ : 2005
ಮೊದಲನೆಯ ಮರುಮುದ್ರಣ : 2021 (ಶಕ 1943)

Makkalu Needida Shikshe (*Kannada Original*)
₹ 55.00

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
ನೆಹರೂ ಭವನ, 5, ಇನ್‌ಸ್ಟಿಟ್ಯೂಶನಲ್ ಏರಿಯಾ, ಫೇಜ್–II
ವಸಂತ್ ಕುಂಜ್, ಹೊಸ ದೆಹಲಿ–110070 ಇವರಿಂದ ಪ್ರಕಟಿತ.
website : www.nbtindia.gov.in

ಪಾತ್ರಗಳು

ಹುಡುಗ
ಸುಧಾ
ಅನಿತಾ
ರಾಜ
ಅನಿಲ
} ಮಾಧ್ಯಮಿಕ ಶಾಲೆಯ ಕೊನೆಯ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪ್ರಕೃತಿ ಪ್ರೇಮಿ ಮಕ್ಕಳು.

ಮರ ಕಡಿಯುವವ
ಶಿಕ್ಷಕಿ

ಹಿರಿಯ–1
ಹಿರಿಯ–2
ಹಿರಿಯ–3
} ಮೊದಲ ದೃಶ್ಯದಲ್ಲಿ ಹುಡುಗನಿಗೆ ಕತೆ ಹೇಳಲು ಇವರಲ್ಲಿ ಒಬ್ಬರು ಬರಬೇಕು.

ಕಾವಲುಗಾರ
ಯಜಮಾನಪ್ಪ

ಜನ, ಮಕ್ಕಳು, ಕೋತಿ, ಹಕ್ಕಿ, ಅಳಿಲು.

ಸೂಚನೆ : ನಾಟಕದ ಪ್ರಾರಂಭದಲ್ಲಿ ಬರುವ ಮರವನ್ನಾಗಲೀ, ಅಂತ್ಯದಲ್ಲಿ ಹಾಗೆ ಕಾಣುವ ಮರದ ಬೊಂಬೆಯನ್ನಾಗಲೀ ರಂಗದ ಮೇಲೆ ತರಬೇಕೆಂದಿಲ್ಲ. ರಂಗ ನಿರ್ದೇಶಕ ತನ್ನ ಅನುಕೂಲ, ಕಲ್ಪನೆಗಳಿಗೆ ಅನುಗುಣವಾಗಿ ಇದನ್ನು ರೂಪಿಸಿಕೊಳ್ಳಬಹುದು.

ಅವಧಿ : ಸುಮಾರು ಒಂದು ಗಂಟೆ.

(ರಂಗಕ್ಕೆ ಅಳವಡಿಸಲು ಲೇಖಕನ ಅನುಮತಿ ಅವಶ್ಯ).

ದೃಶ್ಯ : ಒಂದು

(ರಂಗದ ಮೇಲೆ ಅಸ್ಪಷ್ಟ ಬೆಳಕು. ಗಿಡಮರಗಳು ಕಾಣುತ್ತಿವೆ. ವಯಸ್ಸಾದ ವ್ಯಕ್ತಿಯೋರ್ವ ಬಕೇಟಿನಲ್ಲಿ ನೀರು ತಂದು ತಂದು ಗಿಡಮರಗಳಿಗೆ ಹಾಕುತ್ತಿರುವನು. ಗಿಡ ಸರಿಪಡಿಸುವನು. ಇದನ್ನು ಚಿಕ್ಕ ಹುಡುಗ ಕುತೂಹಲದಿಂದ ನೋಡಿ–)

ಹುಡುಗ : ತಾತಾ

ವ್ಯಕ್ತಿ : ಏನು ಮರಿ?

ಹುಡುಗ : ತಾತಾ, ನಾನು ನಿಮ್ಮನ್ನು ಇಲ್ಲಿ ತುಂಬಾ ದಿನಗಳಿಂದ ನೋಡ್ತಾ ಇದೀನಿ. ನೀವು ಏನ್ ಮಾಡ್ತಿದೀರಾ?

ವ್ಯಕ್ತಿ : ನಾನು ಗಿಡ ಬೆಳೆಸ್ತಿದೀನಿ ಮರಿ. ಸಣ್ಣ ಸಸಿ ನೆಟ್ಟು ಅದು ಬೆಳೆದು ಮರವಾಗೋ ಹಾಗೆ ನೋಡ್ಕೋತೀನಿ.

ಹುಡುಗ : ಹೌದಾ ತಾತಾ?

ವ್ಯಕ್ತಿ : ಹೌದು. ಸುತ್ತ ನಿನಗೆ ಏನು ಕಾಣುತ್ತೆ ಹೇಳು?

ಹುಡುಗ : ಬರೀ ಮರಗಳು. ಹೂವು ಹಣ್ಣು ಬಿಟ್ಟಿರೋ ಬೇರೆ ಬೇರೆ ಮರಗಳು.

ವ್ಯಕ್ತಿ : ಈ ಮರ ಗಿಡಗಳನ್ನೆಲ್ಲ ನಾನೇ ಬೆಳೆಸಿದ್ದು.

ಹುಡುಗ : ನೀವು ಒಬ್ಬರೇನೇ?


ವ್ಯಕ್ತಿ : ನಾನು ಮಾತ್ರ ಅಲ್ಲ. ನನ್ನ ಹಾಗೇನೆ ಮತ್ತೂ ಮೂವರು ಈ ಕೆಲಸ ಮಾಡ್ತೀದಾರೆ. ಅಲ್ಲಿ ನೋಡು.

ಹುಡುಗ : ಹೌದಲ್ಲ, ತಾತಾ. ಇಲ್ಲಿರೋ ಅಷ್ಟೂ ಮರಗಳನ್ನು ನೀವು ನಾಲ್ವರೂ ಸೇರಿ ಬೆಳೆಸಿದ್ದು ಅನ್ನಿ?

ವ್ಯಕ್ತಿ : ಹೌದು ಮರಿ. ಗುಳಿ ತೋಡಿ, ಗೊಬ್ಬರ ಹಾಕಿ, ಸಸಿ ನೆಟ್ಟು ನೀರು ಹಾಕಿ ಬೆಳೆಸಿದೋರೇ ನಾವು.

ಹುಡುಗ : ಇದನ್ನ ಮಾಡಿದ್ರೆ ನಿಮಗೆ ಏನು ಸಿಗುತ್ತೆ ತಾತ?

ವ್ಯಕ್ತಿ : ಸಂತೋಷ ಸಿಗತ್ತೆ ಮರಿ ಸಂತೋಷ.



ಹುಡುಗ : ಇದರಲ್ಲಿ ಅಂಥಾದ್ದು ಏನಿದೆ ತಾತಾ ಸಂತೋಷ?
ವ್ಯಕ್ತಿ : ಮರಗಳಿಂದ ಏನೇನೆಲ್ಲ ಉಪಯೋಗ ಆಗುತ್ತೆ ಅನ್ನೋದನ್ನು ತಿಳಕೊಂಡಾಗ ಮನಸ್ಸಿಗೆ ಸಂತೋಷ ಆಗತ್ತೆ.
ಹುಡುಗ : ಹೌದಾ ತಾತಾ?
ವ್ಯಕ್ತಿ : ಹೌದು ಮರಿ. ಈ ಪ್ರದೇಶದಲ್ಲಿ ಒಂದು ಕಾಲದಲ್ಲಿ ತುಂಬಾ ಮರಗಳಿದ್ವು.
ಹುಡುಗ : ಅಂದ್ರೆ ದಟ್ಟ ಕಾಡು ಅಂತಾರಲ್ಲ, ಅಂಥಾ ಕಾಡು ಇಲ್ಲಿತ್ತು ಅಲ್ವಾ?
ವ್ಯಕ್ತಿ : ಹೌದು, ಭಾರೀ ಕಾಡು. ನೂರಾರು ಹಕ್ಕಿಗಳಿಗೆ ಆಶ್ರಯ ಕೊಟ್ಟ ಮರಗಳು ಇಲ್ಲಿದ್ವು.
ಹುಡುಗ : ಅವೆಲ್ಲ ಏನಾದ್ವು ತಾತಾ?
ವ್ಯಕ್ತಿ : ಜನ ಹಿಂದೆ ಮುಂದೆ ನೋಡದೇ ಇವುಗಳನ್ನು ಕಡೀಲಿಕ್ಕೆ ಪ್ರಾರಂಭ ಮಾಡಿದ್ರು.
ಹುಡುಗ : ಛೇ, ಮರಗಳನ್ನು ಯಾಕೆ ಕಡಿದ್ರು?
ವ್ಯಕ್ತಿ : ಒಲೆಗೆ ಹಾಕಿ ಉರಿಸಲಿಕ್ಕೆ, ಮನೆ ಕಟ್ಟಲಿಕ್ಕೆ ಅಂತ ಕಡಿದ್ರು. ಹಣ ಸಿಗುತ್ತೆ ಅಂತ ಕಡಿದ್ರು.
ಹುಡುಗ : ಆಮೇಲೆ ಏನಾಯ್ತು?
ವ್ಯಕ್ತಿ : ಏನಾಯ್ತು? ಕಾಡು ಮಾಯವಾಯ್ತು. ಮಳೆ ಬೀಳೋದು ಕಡಿಮೆಯಾಯ್ತು.
ಹುಡುಗ : ಆವಾಗ?
ವ್ಯಕ್ತಿ : ಎಲ್ಲ ಕಳಕೊಂಡ ಮೇಲೆ ಜನಕ್ಕೆ ಬುದ್ಧಿ ಬಂತು. ಜನ ಯೋಚನೆ ಮಾಡಲಿಕ್ಕೆ ಶುರು ಮಾಡಿದ್ರು. 'ಮರ ಉಳಿಸಿ ಮರ ಬೆಳೆಸಿ' ಅಂತಾ ಚಳವಳಿ ಹೂಡಿದ್ರು.
ಹುಡುಗ : ಅದು ಸರಿ ತಾತ. ನೀವು ಈ ಕೆಲಸಾನ ಯಾಕೆ ವಹಿಸಿಕೊಂಡ್ರಿ?
ವ್ಯಕ್ತಿ : ಈವತ್ತು ನನಗೆ ಇದು ಒಂದು ಕೆಲಸ ಮರಿ. ಅದರ ಹಿಂದೆ ನಮ್ಮ ನಾಲ್ವರಿಗೆ ಈ ಕೆಲಸ ಗಂಟು ಬಿದ್ದದ್ದು, ಒಂದು ಶಿಕ್ಷೆಯಾಗಿ.
ಹುಡುಗ : ಶಿಕ್ಷೆ? ಏನು ತಾತಾ ಹಾಗಂದ್ರೆ?
ವ್ಯಕ್ತಿ : ನಾನು ನನ್ನ ಒಂದಿಬ್ಬರು ಸ್ನೇಹಿತರು ಸೇರಿಕೊಂಡು ಒಂದು ತಪ್ಪು ಮಾಡಿದ್ವಿ. ಜನ ನಮಗೆ ಕೊಟ್ಟ ಶಿಕ್ಷೆ ಇದು. ಬಹಳ ಮುಖ್ಯವಾಗಿ ನಿನ್ನಂಥಾ ಮಕ್ಕಳು ಕೊಟ್ಟ ಶಿಕ್ಷೆ.
ಹುಡುಗ : ಅದೇನು ಹೇಳಿ ತಾತ. ಗಿಡಗಳಿಗೆ ಬೇಕಾದ್ರೆ ನಾನು ನೀರು ಹಾಕ್ತೇನೆ.
ವ್ಯಕ್ತಿ : ನೀನು ನೀರು ಹಾಕೋದು ಬೇಡ ಮರಿ. ಇಲ್ಲಿ ಎಲ್ಲ ಕೆಲಸಾನೂ ನಾನೇ ಮಾಡಬೇಕು. ನೀನು ನನ್ನ ಜತೆಗೆ ಬಾ. ಗಿಡಗಳಿಗೆ ನೀರನ್ನು ಹಾಕ್ತಾ ಹಾಕ್ತಾ ಈ ಕತೇನ ನಾನು ನಿನಗೆ ಹೇಳತೀನಿ.
ಹುಡುಗ : ಹೇಳಿ ತಾತ.

ವ್ಯಕ್ತಿ : ಇಲ್ಲಿರೋ ಮರಗಳನ್ನು ಜನ ಕಡದ್ರು. ಒಂದೊಂದಾಗಿ ಒಂದೊಂದಾಗಿ ಮರಗಳು ಕಡಿಮೆ ಆದ್ವು. ಈಗ ಸುಮಾರು ಇಪ್ಪತ್ತು ವರ್ಷಗಳ ಹಿಂದೆ, ಈಗ ಹೈಸ್ಕೂಲು ಇದೆಯಲ್ಲ ಅದರ ಹಿಂದೆ ಒಂದು ಮರ ಇತ್ತು. ಭಾರೀ ದೊಡ್ಡ ಮರ......

(ಬೆಳಕು ಪ್ರಖರವಾಗುತ್ತದೆ. ಹಿಂದಿನ ದೃಶ್ಯ ಮರೆಯಾಗುತ್ತದೆ. ದೂರದಲ್ಲಿ ಒಂಟಿ ಮರ, ರೆಂಬೆ ಕೊಂಬೆ ಚಾಚಿಕೊಂಡು ಬೆಳೆದಿದೆ. ಮರದಿಂದ ಹಕ್ಕಿಗಳ ಕಲರವ. ಗಾಳಿ ಬೀಸುತ್ತಿದೆ. ತುಂಬ ಮೋಹಕವಾದ ಪರಿಸರ. ಶಾಲೆಯ ಗಂಟೆಯ ಸದ್ದು. ಹೋ ಎಂದು ಶಾಲೆಯಿಂದ ಹೊರಟಿದ್ದ ಮಕ್ಕಳ ಗದ್ದಲ.)



(ಸುಧಾ, ಅನಿತ, ಅನಿಲ, ರಾಜ, ಊಟದ ಡಬ್ಬಿ ಹಿಡಿದು ಹಾಡುತ್ತ ಕುಣಿಯುತ್ತ ಬರುತ್ತಾರೆ.)

ಗೇರ್ ಗೇರ್ ಮಂಗಣ್ಣ
ಕಡ್ಲೆಕಾಯಿ ತಿನ್ನಣ್ಣ
ನಾನೂ ನೀನೂ ಸೇರೋಣ
ಮರಕೋತಿ ಆಟ ಆಡೋಣ

ರಾಮನ ಅಳಿಲೇ ಬಾರಣ್ಣ
ಅತ್ತಿಹಣ್ಣು ತಾರಣ್ಣ
ನನಗೊಂದಿಷ್ಟು ಕೊಡಣ್ಣ
ಇಬ್ಬರು ಸೇರಿ ಆಡೋಣ

ಹಕ್ಕಿ ಹಕ್ಕಿ ಬಣ್ಣದ ಹಕ್ಕಿ
ಕೆಂಪನೆ ಕೊಕ್ಕಿನ ಹಸಿರಿನ ಹಕ್ಕಿ
ಬಿಳುಪಿನ ಬಣ್ಣದ ಓ ಬೆಳ್ಳಕ್ಕಿ
ನನ್ನೊಡನಾಡಲು ಬಾ ಬಾ ಹಕ್ಕಿ

(ಅವರಿಗಾಗಿ ಕಾದಿದ್ದವೋ ಅನ್ನುವ ಹಾಗೆ ಕೋತಿ, ಅಳಿಲು, ಹಕ್ಕಿಗಳು ಮರದಿಂದ ಇಳಿದು ಬಂದು ಅವೂ ಮಕ್ಕಳ ಜತೆ ಸೇರಿ ಕುಣಿದು ಅಷ್ಟು ದೂರ ಕೂರುತ್ತವೆ. ಮಕ್ಕಳು ಡಬ್ಬಿ ತೆರೆದು ಊಟಕ್ಕೆ ತೊಡಗುತ್ತಾರೆ. ತಾವು ಊಟ ಮಾಡುವುದಕ್ಕಿಂತ ಮಿಗಿಲಾಗಿ ಪ್ರಾಣಿ–ಪಕ್ಷಿಗಳಿಗೆ ನೀಡುತ್ತಾರೆ. ತುಂಟಾಟ, ಕೇಕೆ, ನಗು, ಮಾತು. ಊಟ ಮುಗಿಯುತ್ತದೆ. ಡಬ್ಬಿ ತೆಗೆದಿರಿಸಿ ಎಲ್ಲರೂ ಕೈತೊಳೆದು ಬರುತ್ತಾರೆ. ಪ್ರಾಣಿ, ಹಕ್ಕಿಗಳಿಗೆ ಮಕ್ಕಳು ಟಾಟಾ ಹೇಳುತ್ತಾರೆ. ನಾಳೆ ಬನ್ನಿ, ನಾಳೆ ಬಾ ಮಂಗಣ್ಣ ಎಂದೆಲ್ಲ ಹೇಳುತ್ತಾರೆ. ಕೋತಿ, ಅಳಿಲು, ಹಕ್ಕಿಗಳು ಮರವೇರಿ ಮಾಯವಾಗುತ್ತವೆ.)

ರಾಜ : ಅನಿಲ, ಇಲ್ಲಿ ಬಂದು ಕೂತು ಊಟ ಮಾಡೋದ್ರಲ್ಲಿ ಎಷ್ಟೊಂದು ಮಜ ಇದೆ ಅಲ್ವಾ?

ಅನಿಲ : ಹೌದು. ಇಂಥಾ ವಾತಾವರಣ ಮನೇಲಿ ಎಲ್ಲಿರುತ್ತೆ? ಒಂದು ಕಡೆ ಸೆಖೆ, ಬೆಳಕು ಇರೋದಿಲ್ಲ. ಹಗಲಲ್ಲೆ ಮುತ್ತಿಡೋ ಸೊಳ್ಳೆ ಹೊಗೆ!

ಸುಧಾ : ಮತ್ತೆ ಈ ಗೇರ್ ಗೇರ್ ಮಂಗಣ್ಣ ಕೂಡ ಅಲ್ಲಿರೋದಿಲ್ಲ.

ಅನಿತಾ : ಮೈನಾ, ಪಾರಿವಾಳಾನೂ ಅಲ್ಲಿ ಸಿಗೋದಿಲ್ಲ.



ರಾಜ : ಹೀಗಾಗಿ ಮನೇಲಿ ಊಟ ಮಾಡೋದು ಅಂದ್ರೆ ಹಿಂಸೆ. ಅದೂ ರಜದ ದಿನ ಅನ್ನ ಗಂಟಲಲ್ಲಿ ಇಳಿಯೋದೇ ಇಲ್ಲ.

ಅನಿತಾ : ರಾತ್ರಿ ಹೊತ್ತೂ ಅಷ್ಟೇ. ತುತ್ತು ನುಂಗಲಿಕ್ಕೆ ಕಷ್ಟಪಡಬೇಕು.

ಸುಧಾ : ನನಗೂ ಅಷ್ಟೆ. ಅಮ್ಮನ ಹತ್ರ ನಾನು 'ಅಮ್ಮ ಅಮ್ಮ, ನಂಗೆ ಶಾಲಿ ಹತ್ರ ಇರೋ ಮರದ ಕೆಳಗೆ ಕೂತು ಊಟ ಮಾಡೋದೇ ಇಷ್ಟ' ಅಂದೆ. ಅದಕ್ಕೆ ಅವಳು ಏನಂದ್ಲು ಗೊತ್ತಾ?

ಅನಿತಾ : ಗೊತ್ತು ಬಿಡು.

ಸುಧಾ : ಅಲ್ವೆ , ನಮ್ಮಮ್ಮ ಹೇಳಿದ್ದು ನಿನಗೆ ಹ್ಯಾಗೇ ಗೊತ್ತು?

ಅನಿಲ : ಅವಳಮ್ಮಾನೂ ಅದನ್ನೇ ಹೇಳಿರಬೇಕು.

ಅನಿತಾ : ಕರೆಕ್ಟ್. ಎಲ್ಲರ ಅಮ್ಮಂದಿರೂ ಒಂದೇ ರೀತೀಲಿ ಯೋಚನೆ ಮಾಡ್ತಾರೆ.

ರಾಜ : ಇರಲಿ, ಹೇಳು ಸುಧಾ, ನಿನ್ನ ಅಮ್ಮ ಏನು ಹೇಳಿದ್ರು?

ಸುಧಾ : 'ನೀನು ಮರದ ಕೆಳಗೆ ಕೂತು ಊಟ ಮಾಡೋದ್ರ ಬದಲು ತಕ್ಕೊಂಡು ಹೋಗಿದ್ದನ್ನು ಕೋತಿಗೆ, ಕಾಗೆಗೆ ಹಾಕ್ತೀಯಾ. ಅದಕ್ಕೇನೇ ಅಲ್ಲಿ ಕೂತು ಊಟ ಮಾಡೋದು ಇಷ್ಟ ಅಂತೀಯ' ಅಂದ್ರು.

ರಾಜ : ನಮ್ಮಮ್ಮ 'ಅಲ್ಲಿ ಕೋತಿ, ಕಾಗೆ ಕೊಬ್ಬಿರಬೇಕು, ನೀನು ಸೊರಗ್ತಿದೀಯ' ಅಂತಾಳೆ.

ಅನಿತಾ : ನಮ್ಮ ನಮ್ಮ ಅಮ್ಮಂದಿರು ಹೇಳೋದಂತೂ ನಿಜ ಅಲ್ವಾ?

ಸುಧಾ : ನಾವಿಲ್ಲಿ ಬಂದು ಊಟ ಮಾಡೋದು ನಿಜ.

ರಾಜ : ಕೋತಿ ಹಕ್ಕಿಗಳು ಬರೋದೂ ನಿಜ.

ಅನಿಲ : ನಾವು ತಂದಿದ್ದನ್ನ ಅವುಗಳಿಗೆ ಹಾಕೋದೂ ನಿಜ.

ಅನಿತಾ : ಅಂದ ಮೇಲೆ ನಾವು ಅಮ್ಮಂದಿರನ್ನು ದೂರೋದ್ರಲ್ಲಿ ಅರ್ಥವಿಲ್ಲ.

ಸುಧಾ : ಛೆ! ನಾನು ಅಮ್ಮನನ್ನು ದೂರ್ತಾ ಇಲ್ಲ. ಸಹಜವಾಗಿ ಮಾತು ಬಂತು, ಅಷ್ಟೆ.

ರಾಜ : ಅದಿರ್ಲಿ, ನಾನೊಂದು ಮುಖ್ಯ ಪ್ರಶ್ನೆ ಕೇಳಲಾ?

ಅನಿತಾ : ಕೇಳಪ್ಪ ಕೇಳು. ನಿನಗೆ ಯಾರು ಬೇಡ ಅಂದೋರು.

ರಾಜ : ನಮಗೆಲ್ಲರಿಗೂ ಇಲ್ಲಿಗೆ ಬಂದು, ಕೂತು ಊಟ ಮಾಡಿದ್ರೆ ಸಂತೋಷ ಆಗುತ್ತೆ ಅಲ್ವಾ?

ಸುಧಾ, ಅನಿತಾ, ಅನಿಲ : ಹೌದು, ಸಂತೋಷ ಆಗುತ್ತೆ. ಏನೀಗ?

ರಾಜ : ಈ ಸಂತೋಷಕ್ಕೆ ಕಾರಣ ಏನು?

ಸುಧಾ : ಕಾರಣ.....ತಂಪಾಗಿ ಬೀಸಿ ಬರೋ ಗಾಳಿ.

ಅನಿತಾ : ನಾವು ಬಂದದ್ದೇ ನಮ್ಮನ್ನು ನೋಡಿ ಓಡಿ ಬರೋ ಅಳಿಲು, ಕೋತಿ, ಹಕ್ಕಿ.

ಅನಿಲ : ಯಾವುದೇ ಗಲಾಟೆ ಗಡಿಬಿಡಿ ಇಲ್ಲದಿರೋ ಈ ವಾತಾವರಣ.

ರಾಜ : ಅಲ್ಲ, ನೀವು ಮುಖ್ಯವಾದ ಒಂದು ವಿಷಯಾನ ಗಮನಿಸಿಲ್ಲ.

ಸುಧಾ : ಯಾವುದು ಅದು? ನನಗಂತೂ ಹೊಳೀತಿಲ್ಲ.

ಅನಿತಾ : ನನಗೂ ಅಷ್ಟೇ.

ಅನಿಲ : ನೀನೇ ಹೇಳಿಬಿಡಪ್ಪ. ಅದು ಏನು ಅಂತಾ.

ರಾಜ : ನಮ್ಮೆಲ್ಲರ ಸಂತೋಷಕ್ಕೆ ಮೂಲ ಕಾರಣ ಈ ಮರ.

ಸುಧಾ
ಅನಿತಾ
ಅನಿಲ } : ಮರಾ !

ರಾಜ : ಹೌದು . ತಂಪಾದ ಗಾಳಿಗೆ ಈ ಮರ ಕಾರಣ. ಡಬ್ಬಿ ತೆರೆದ ಕೂಡಲೇ ಕೋತಿ, ಅಳಿಲು, ಹಕ್ಕಿ ಇಳಿದು ಬರೋದಕ್ಕೆ ಈ ಮರ ಕಾರಣ.

ಸುಧಾ : ಓ! ಹೌದಲ್ಲ. ಇಲ್ಲಿ ಮರ ಇರಲಿಲ್ಲ ಅಂದ್ರೆ ತಂಪಾದ ಗಾಳಿ ಇರ್ತಿರಲಿಲ್ಲ.

ಅನಿಲ : ಕೋತಿ, ಅಳಿಲು, ಹಕ್ಕಿ ಇಳಿದು ನಮ್ಮ ಹತ್ತಿರ ಬರ್ತಾ ಇರಲಿಲ್ಲ.



ಅನಿತಾ : ಈ ಪ್ರದೇಶ ಇಷ್ಟೊಂದು ಶಾಂತವಾಗಿ ಇರ್ತಿರಲಿಲ್ಲ.

ರಾಜ : ಇದಕ್ಕೆಲ್ಲಕ್ಕೂ ಈ ಮರ ಕಾರಣ ಅಲ್ವಾ?

(ಎಲ್ಲರೂ ತಲೆ ಎತ್ತಿ ಕುತೂಹಲದಿಂದ ಮರವನ್ನು ನೋಡುವರು.)

ರೆಂಬೆ ಕೊಂಬೆಗಳನ್ನು ದಿಕ್ಕು ದಿಕ್ಕಿಗೂ ಚಾಚಿಕೊಂಡು ನಿಂತಿರೋ ಭಂಗಿ ನೋಡಿ ಎಷ್ಟೊಂದು ಅದ್ಭುತ!

ಸುಧಾ : ರೆಂಬೆ ಕೊಂಬೆ ತುದೀಲಿ ತಾರಮ್ಮಯ್ಯ ಮಾಡ್ತಿರೋ ಲಕ್ಷೋಪಲಕ್ಷ ಎಲೆಗಳನ್ನೇ ನೋಡಿ, ಎಷ್ಟೊಂದು ಚೆಂದ!

ಅನಿಲ : ಅಲ್ಲೊಂದು ಕಾಗೆ ಗೂಡು, ಇಲ್ಲೊಂದು ಮೈನಾಹಕ್ಕಿ, ಹಾಂ! ಈ ಕಡೆ ಕಾಜಾಣ. ಮತ್ತೂ ಕೆಳಗೆ ಪೊಟರೆಯಲ್ಲಿ ಮರಿ ಮಾಡಿರೋ ಗೊರವಂಕ.

ಅನಿತಾ : ಮರೀನ ಅಪ್ಪಿಕೊಂಡು ಕೂತಿರೋ ಕೋತಿ ಒಂದು ಕಡೆ. ರೆಂಬೆಯಿಂದ ರೆಂಬೆಗೆ ಹಾರ್ತಿರೋ ಕೆಂಜಳಿಲು ಈ ಕಡೆ. ಆ ತುದೀಲಿ ರೆಂಬೆಗೆ ಅಂಟಿಕೊಂಡಿರೋ ಕಾಡುಪಾಪ. ಯಾವುದೋ ಹಣ್ಣು ತಿಂತಿರೋ ಅಳಿಲು.

ರಾಜ : ಇದು ಮರ ಅಲ್ಲ. ಪ್ರಾಣಿ ಪಕ್ಷಿಗಳ ಆಶ್ರಯದಾತ.

ಅನಿತಾ : ಹೌದಲ್ಲ. ಇದೆಲ್ಲ ನಮಗೆ ಗೊತ್ತೇ ಇರಲಿಲ್ಲ.

ಸುಧಾ : ಗೊತ್ತಿಲ್ಲದೇ ಇರೋದು ಮತ್ತೂ ಇರಬಹುದು ಅಲ್ವ?

ಅನಿಲ : ಇದ್ದೇ ಇರುತ್ತೆ.

ರಾಜ : ಹಾಗಾದ್ರೆ ನಾವು ಒಂದು ಕೆಲಸ ಮಾಡೋಣ.

ಅನಿಲ : ಏನು ಹೇಳು.

ರಾಜ : ನಮ್ಮ ಟೀಚರ್ ಮುಂದಿನ ಸಾರಿ ಪ್ರಕೃತಿ ಪಾಠಾನ ಈ ಮರದ ಬಗ್ಗೆನೇ ಮಾಡಲಿ.

ಅನಿತಾ : ಅಷ್ಟೇ ಅಲ್ಲ, 'ನಾಲ್ಕು ಗೋಡೆ ನಡುವೆ ಪ್ರಕೃತಿ ಪಾಠ ಮಾಡಬೇಡಿ. ಈ ಮರದ ಕೆಳಗೇನೇ ಬಂದು ಪಾಠ ಮಾಡಿ' ಅಂತಾ ನಾವು ಅವರನ್ನ ಕೇಳಿಕೊಳ್ಳೋಣ.

ಸುಧಾ : ಕರೆಕ್ಟ್, ಒಳ್ಳೇ ಸಲಹೆ ನಿನ್ನದು.

ರಾಜ : ಈವತ್ತೇ ಟೀಚರ್‌ಗೆ ಹೋಗಿ ಹೇಳೋಣ.

ಅನಿತಾ : ಪ್ರಕೃತಿಯ ನಡುವೆ ಪ್ರಕೃತಿ ಪಾಠ— ಒಳ್ಳೆಯ ಸಲಹೆ.

(ಶಾಲೆಯ ಗಂಟೆ ಕೇಳಿಸುವುದು. ಎಲ್ಲರೂ ಊಟದ ಡಬ್ಬಿ ಎತ್ತಿಕೊಂಡು "ಪ್ರಕೃತಿಯ ನಡುವೆ ಪ್ರಕೃತಿ ಪಾಠ" ಎಂದು ಕೂಗುತ್ತ ನಿರ್ಗಮಿಸುವರು.)

– ತೆರೆ –

ದೃಶ್ಯ : ಎರಡು

(ಅದೇ ಹಿಂದಿನ ದೃಶ್ಯ. ಶಿಕ್ಷಕಿ, ಸುಧಾ, ರಾಜ, ಅನಿಲ, ಅನಿತಾ ಮತ್ತು ಕೆಲ ಮಕ್ಕಳಿವೆ. ಹಾಡು ನೃತ್ಯದ ಜತೆ ಪ್ರಕೃತಿ ಪಾಠ ನಡೆಯುತ್ತದೆ. ನಡುವೆ ಮರದ ಮೇಲಿನ ಕೋತಿ ಹಕ್ಕಿಗಳನ್ನು ಮಕ್ಕಳು ಅನುಕರಿಸುವರು. ಮರದ ಎಲೆ ಉದುರುವ ವಿಷಯ ಬಂದಾಗ ಗಾಳಿಗೆ ತೇಲಿ ಬರುವ ಎಲೆ ಹಿಡಿಯುವುದು, ಮಳೆ ಬಂದಾಗ ಮರದ ಕೆಳಗೆ ನಿಲ್ಲುವುದು, ಬಿಸಿಲಲ್ಲಿ ಮರದ ತಂಪಿನಲ್ಲಿ ಕೂರುವುದು ಇತ್ಯಾದಿ ಅಭಿನಯಿಸುತ್ತಾರೆ.)



ಶಿಕ್ಷಕಿ : ಪ್ರಕೃತಿಯ ಮಡಿಲಲ್ಲಿ ಆದರದೇ ಪಾಠ
ಸುತ್ತಲು ಹರಡಿದೆ ಸೊಗಸಿನ ನೋಟ
ಹಸಿರೇ ಹಸಿರು ಎಲ್ಲೆಡೆ ಇರಲು
ಉಕ್ಕಿದೆ ಎದೆಯಲಿ ಹರುಷದ ಹೊನಲು

ಮಕ್ಕಳು : (ಮೇಲಿನ ಹಾಡನ್ನೇ ಹಾವಭಾವದೊಡನೆ ಹಾಡುತ್ತ ನರ್ತಿಸುತ್ತಾರೆ.)

ಶಿಕ್ಷಕಿ : ಮರಗಿಡ ಬಳ್ಳಿಗು ನಮಗೂ ನಂಟು
ಪ್ರಾಣಿ ಪಕ್ಷಿಗೂ ಬಿದ್ದಿದೆ ಗಂಟು
ಪರಿಸರ ಉಳಿದರೆ ನಮ್ಮಯ ಉಳಿವು
ಇಲ್ಲದೆ ಹೋದರೆ ನಮ್ಮಯ ಅಳಿವು

ಪರಿಸರಕೆಲ್ಲ ಒಡೆಯನು ಈತ
ವೃಕ್ಷರಾಜನೇ ಕಾಡಿನ ತಾತ
ಒಂಟಿ ಕಾಲಲಿ ನಿಂತಿರುವಾತ
ಸಾವಿರ ಕೈಗಳ ಪಡೆದಿರುವಾತ

ಬೇಸಿಗೆ ಬಿಸಿಲು ನೀ ಪಡೆದು
ಜನತೆಗೆ ನೀಡುವೆ ತಣ್ಣೆಳಲು
ಅಬ್ಬರದಿಂದಲಿ ಹೊಯ್ಯುವ ಮಳೆಗೆ
ನೀನೇ ಆಗುವೆ ಹಸಿರು ಕೊಡೆ

ವಸಂತ ವೇಗದಿ ಬರುತಿರಲು
ಕಂಡೆವು ನಿನ್ನಲಿ ಎಳೆ ಚಿಗುರು
ರೆಂಬೆ ಕೊಂಬೆಯಲಿ ಹಾಡುತ್ತ
ನಲಿದವು ಬಣ್ಣದ ಹಕ್ಕಿಗಳು

ಹೇಮಂತವು ಬರಲಿ ಹೂವರಳಿ
ದುಂಬಿಯ ಹಿಂಡನು ನೀ ಕರೆದೆ
ಥರಗುಟ್ಟುತ ಬಂದಿತು ಚಳಿಗಾಲ
ನಿನ್ನಯ ಎಲೆಗಳು ಉದುರಿದವು

ನೋಡಲು ನಿನ್ನಯ ಸೊಬಗೇ ಅಂದ
ನಿನ್ನ ಪಾದದಡಿ ಕುಣಿವುದೇ ಚೆಂದ
ನಿರ್ಮಲ ಗಾಳಿಯ ನೀಡುವ ಮರವೆ
ಮನುಜನ ಬಾಳಿಗೆ ನೀ ವರವೆ.

(ಮಕ್ಕಳು ಹಾಡು ಕುಣಿತ ಮುಗಿಸಿ ಶಿಕ್ಷಕಿಯ ಸುತ್ತ ಬಂದು ಕುಳಿತುಕೊಳ್ಳುವರು.)

ಶಿಕ್ಷಕಿ : ಮಕ್ಕಳೆ, ನೀವು ಹೇಳಿದ ಹಾಗೆ , ಪ್ರಕೃತಿಯ ನಡುವೆಯೇ ಪ್ರಕೃತಿ ಪಾಠ ಮಾಡಿದ್ದೇನೆ. ಈ ಮರದ ಮಹತ್ವವನ್ನು ತಿಳಿಸಿದ್ದೇನೆ.



ರಾಜ : ಹೌದು ಟೀಚರ್, ನಮಗಂತೂ ತುಂಬಾ ಸಂತೋಷ ಆಯ್ತು.

ಶಿಕ್ಷಕಿ : ಆಯಿತಲ್ಲ. ಈಗ ಮುಂದಿನ ವಿಷಯ ಏನು ಅನ್ನೋದು ನಿಮಗೆ ಗೊತ್ತಲ್ಲ.

ಮಕ್ಕಳು : (ಪರಸ್ಪರ ಮುಖ ನೋಡಿಕೊಂಡು 'ಏನು?' ಎಂದು ಕೇಳುವರು.)

ರಾಜ : ಮುಂದಿನ ವಿಷಯ ಏನು ಟೀಚರ್ರೆ?

ಶಿಕ್ಷಕಿ : ತರಗತೀಲಿ ಮಾಡಬೇಕಾದ ಪಾಠಗಳನ್ನು ಮಾಡಿ ಆಗಿದೆ. ಕಲಿಸಬೇಕಾದ ಲೆಕ್ಕಗಳನ್ನು ಕಲಿಸಿದ್ದೇನೆ. ನಿಮಗೆ ಮತ್ತೂ ಚೆನ್ನಾಗಿ ಅರ್ಥವಾಗಲಿ ಅಂತ ಇಲ್ಲಿಗೂ ಬಂದು ಪಾಠ ಮಾಡಿದ್ದೇನೆ. ಇನ್ನು ಮುಂದಿನದು ಏನು ಹೇಳಿ ನೋಡೋಣ?

ಅನಿಲ : ಮುಂದಿನದು.....ಮುಂದಿನದು.....

ಸುಧಾ : ಏನು ಹೇಳಿ ಟೀಚರ್.

ರಾಜ : ಹಾಂ, ನನಗೆ ಗೊತ್ತಾಯ್ತು. ಮುಂದಿನದು ಪರೀಕ್ಷೆ.

ಮಕ್ಕಳು : ಪರೀಕ್ಷೆ....ಪರೀಕ್ಷೆ.

ಶಿಕ್ಷಕಿ : ಹೌದು, ಪರೀಕ್ಷೆ. ನಾವು ಕಲಿಸಿದ್ದನ್ನು ನೀವು ಹೇಗೆ ಅರ್ಥ ಮಾಡಿಕೊಂಡಿದ್ದೀರ ಅನ್ನೋದು ನಮಗೆ ತಿಳಿಯಬೇಕಲ್ಲ. ಅದಕ್ಕೆ ಈ ಪರೀಕ್ಷೆಗಳನ್ನು ಮಾಡೋದು. ಇನ್ನೊಂದು ವಾರಕ್ಕೆ ಪರೀಕ್ಷೆ. ಆಮೇಲೆ ಬೇಸಿಗೆ ರಜಾ.

ಮಕ್ಕಳು : ರಜಾ ರಜಾ ಕೋಳಿ ಮಜಾ!

ಶಿಕ್ಷಕಿ : ಈಗಲೇ ಕುಣಿದಾಡಬೇಡಿ. ಈಗ ಚೆನ್ನಾಗಿ ಓದಿಕೊಂಡರೆ ರಜೆಯನ್ನು ಸಂತೋಷದಿಂದ ಕಳೀಬಹುದು. ಎಲ್ಲಾ ಕಷ್ಟಪಟ್ಟು ಓದಿ. ನಾನು ಬರತೀನಿ.

ಮಕ್ಕಳು : ನಮಸ್ಕಾರ ಟೀಚರ್.

ಶಿಕ್ಷಕಿ : ನಮಸ್ಕಾರ.

(ಶಿಕ್ಷಕಿಯ ನಿರ್ಗಮನ. ಉಳಿದ ಮಕ್ಕಳು ಕೂಡ. ರಾಜ, ಅನಿಲ, ಅನಿತಾ, ಸುಧಾ ಹಿಂದುಳಿಯುತ್ತಾರೆ.)

ಸುಧಾ : ನಾಳೆಯಿಂದ ಎಂಟು ದಿನ ರಜ ಅಲ್ವ?

ರಾಜ : ಹೌದು, ಪರೀಕ್ಷೆಗೆ ಓದಿಕೊಳ್ಳಲಿಕ್ಕೆ ರಜ.

ಅನಿತಾ : ನಾವು ಮನೇಲಿ ಓದಿಕೊಂಡ ಹಾಗೇನೆ.

ಅನಿಲ : ಯಾಕೆ? ಯಾರು ನಿನಗೆ ಅಡ್ಡಿ ಮಾಡೋದು?

ಅನಿತಾ : ಪುಸ್ತಕ ಹಿಡಕೊಂಡು ಕೂತರೆ ಸಾಕು. ಅಮ್ಮ ಕಸ ಹೊಡಿ ಅಂತಾಳೆ. ಅಜ್ಜಿ ಸೂಜಿಗೆ ದಾರ ಹಾಕು ಅಂತಾಳೆ. ಅಪ್ಪ ಇನ್ನೊಂದು ಹೇಳ್ತಾರೆ.

ಸುಧಾ : ಇಲ್ಲ, ಅಣ್ಣ ಟೇಪ್ ರೆಕಾರ್ಡರ್ ಆನ್ ಮಾಡ್ತಾನೆ.

ರಾಜು : ಯಾರೂ ಇಲ್ಲ ಅಂದ್ರೆ ನೆಂಟ್ರು ಪಂಟ್ರು ಬಂದು ಮನೇಲಿ ಹರಟೆಗೆ ಕೂರ್ತಾರೆ.

ಅನಿತಾ : ಓದೋದು ಎಲ್ಲಿ ಬಂತು?

ರಾಜ : ನನಗೊಂದು ಉಪಾಯ ಹೊಳೀತಿದೆ. ಯಾರ ಕಾಟವೂ ಇಲ್ಲ; ಗಲಾಟೆಯೂ ಇಲ್ಲ....

ಸುಧಾ : ಏನು ಉಪಾಯ?

ರಾಜ : ನೇರ ಇಲ್ಲಿಗೆ ಬರೋದು. ಹ್ಯಾಗೂ ಮರದ ತಂಪಾದ ನೆರಳಿದೆ. ಯಾರ ಕಾಟಾನೂ ಇಲ್ಲ. ಇಲ್ಲಿ ಕೂತು ಓದೋದು.

ಅನಿತಾ : ಮತ್ತೆ ಈ ಮಂಗಣ್ಣ ಅಳಿಲು?

ಅನಿಲ : ಏಯ್, ಅವೇನೂ ಜನರ ಹಾಗೆ ಗಲಾಟೆ ಮಾಡಲ್ಲ.

ಸುಧಾ : ಹೌದು, ಒಳ್ಳೆಯ ಉಪಾಯ. ನಾಳೆ ಬೆಳಿಗ್ಗೆ ಕಾಫಿ–ತಿಂಡಿ ಮುಗಿಸಿದ್ದೆ ಇಲ್ಲಿಗೆ ಬರೋಣ.

ಅನಿತಾ : ಜೊತೇಲಿ ಏನಾದರೂ ತರೋಣ...ಮಂಗಣ್ಣನಿಗೆ... ಮೈನಾಗೆ.

ರಾಜ : ಆಯ್ತು ತರೋಣ.

ಅನಿಲ : ಮತ್ತೆ ಪುಸ್ತಕ ಮರೆತು ಬರಬೇಡಿ....ಹಾಂ.

ಸುಧಾ
ಅನಿತಾ } : ಹೌದಲ್ಲ. ಅದೇ ಮರೆತು ಬಂದ್ರೆ ಓದೋದು ಏನನ್ನ?
ರಾಜ

(ನಗುತ್ತ ಎಲ್ಲರೂ ನಿರ್ಗಮಿಸುವರು.)

– ತೆರೆ –

ದೃಶ್ಯ : ಮೂರು

(ಅದೇ ಹಿಂದಿನ ನೋಟ. ಸುಧಾ, ರಾಜ, ಅನಿತಾ, ಅನಿಲ ಓದಿನಲ್ಲಿ ಮಗ್ನರಾಗಿ ಕುಳಿತಿದ್ದಾರೆ. ಮರದಿಂದ ಪಕ್ಷಿಗಳ ಇಂಚರ ಕೇಳಿ ಬರುತ್ತಿದೆ. ಕೋತಿ ಅಳಿಲುಗಳು ತಮ್ಮ ಪಾಡಿಗೆ ಆಟವಾಡುತ್ತಿವೆ. ಓರ್ವ ಮರ ಕಡಿಯುವವ ಹೆಗಲ ಮೇಲೆ ಕೊಡಲಿಯನ್ನು ಹೊತ್ತು ಪ್ರವೇಶಿಸುತ್ತಾನೆ. ಮರದ ಬಳಿ ಹೋಗಿ ಅಲ್ಲಿಯೇ ಬಿದ್ದ ಕಲ್ಲಿನ ಮೇಲೆ ಕೊಡಲಿ ಮಸೆಯ ತೊಡಗುತ್ತಾನೆ. ಆ ಸದ್ದಿಗೆ ಓದುತ್ತಾ ಕುಳಿತವರು ತಲೆ ಎತ್ತುತ್ತಾರೆ.)



ರಾಜ : ಏನಿದು ಶಬ್ದ?

ಸುಧಾ : ಅಲ್ಲ, ಮನೇಲಿ ಗದ್ದಲ ಅಂತ ಇಲ್ಲಿಗೆ ಬಂದ್ರೆ ಇಲ್ಲೂ ಬಂತೆ ಆ ಗದ್ದಲ!

ಅನಿತಾ : ಏನೋ ಮಸೀತಾ ಇದಾನೆ.

ಅನಿಲ : ಕೊಡಲಿ ಅಲ್ವ ಅದು?

ರಾಜ : ಹೌದು, ಕೊಡಲೀನೆ.

(ನಾಲ್ವರೂ ನೋಡುತ್ತ ಕುಳಿತುಕೊಳ್ಳುವರು. ಆತ ಕೊಡಲಿ ಮಸೆದು ಮರದ ಬಳಿ ಬರುತ್ತಾನೆ.)

ರಾಜ : ಕೊಡಲೀನ ಯಾಕೆ ಮಸೀತಾ ಇದ್ದಾನೆ ಗೊತ್ತಾಯ್ತ?

ಸುಧಾ : ಗೊತ್ತಾಯ್ತು, ಗೊತ್ತಾಯ್ತು. ಪಾಪಿ ಮರ ಕಡೀಲಿಕ್ಕೆ ಬಂದಿದ್ದಾನೆ.

ಅನಿಲ : ಅವನು ಮರ ಕಡಿದು ಹಾಕಿದ ಅಂದ್ರೆ ಕೋತಿ ಅಳಿಲಿಗೆ ಜಾಗ ಎಲ್ಲಿ?

ಅನಿತಾ : ಮೈನಾ ಪಾರಿವಾಳ ಗೂಡು ಕಟ್ಟೋದು ಎಲ್ಲಿ?

ರಾಜ : ನಮಗೆ ತಂಪಾಗಿರೋ ಗಾಳಿ ಸಿಗೋದು ಹ್ಯಾಗೆ?

ಸುಧಾ : ನೆರಳು ಹುಡುಕಿಕೊಂಡು ನಾವು ಹೋಗೋದು ಎಲ್ಲಿಗೆ?

ಅನಿಲ : ಹಾಗಾದ್ರೆ ಈಗ ಏನು ಮಾಡೋಣ?

ರಾಜ : ಹೇಳತೀನಿ ಬನ್ನಿ. ಬೇಗ ಬನ್ನಿ.

(ಪುಸ್ತಕ ಇರಿಸಿ ನಾಲ್ವರೂ ಮರದ ಬಳಿ ಹೋಗುವರು. ರಾಜು ಹೇಳಿದ ಹಾಗೆ ನಾಲ್ವರೂ ಮರವನ್ನು ಒಳಗಿರಿಸಿಕೊಂಡು ಕೈ ಕೈ ಹಿಡಿದು ನಿಲ್ಲುವರು. ಕೊಡಲಿ ಹೆಗಲಿಗೇರಿಸಿ ಮರ ಏರ ಹೊರಟ ಮರ ಕಡಿಯುವವ ಹಿಂದೆ ಸರಿದು ನಿಲ್ಲುವನು.)

ಮರ ಕಡಿಯುವವ : ಅರೆ, ಇದೇನು ಹೀಗೆ? ಏಯ್ ಹುಡುಗ್ರ, ದೂರ ಸರೀರಿ.

ರಾಜ : ಯಾಕೆ? ನಾವ್ಯಾಕೆ ದೂರ ಸರೀಬೇಕು?

ಮರ ಕಡಿಯುವವ : ಹೆಗಲ ಮೇಲೆ ಕೊಡಲಿ ಹಾಕ್ಕೊಂಡು ಮರದ ಹತ್ರ ಯಾಕೆ ಬರ್ತಾರೆ, ಹಾಡು ಹೇಳಲಿಕ್ಕ?

ರಾಜ : ನೀವು ಯಾಕೆ ಬಂದಿದೀರೋ ನಮಗೆ ಗೊತ್ತಿಲ್ಲ. ನಾವು ಬಂದಿರೋದು ಮಾತ್ರ ಹಾಡು ಹೇಳಲಿಕ್ಕೆ. ಹಾಡಿ ಕುಣಿಯಲಿಕ್ಕೆ.

(ಎಲ್ಲ ಮಕ್ಕಳೂ ಕೈ ಕೈ ಹಿಡಿದುಕೊಂಡು ಮರದ ಸುತ್ತ ಹಾಡುತ್ತ ಕುಣಿಯುವರು.)

ಮಕ್ಕಳು : ಮರ ಗಿಡ ಬಳ್ಳಿಗು ನಮಗೂ ನಂಟು
ಪ್ರಾಣಿ ಪಕ್ಷಿಗೂ ಬಿದ್ದಿದೆ ಗಂಟು
ಪರಿಸರ ಉಳಿದರೆ ನಮ್ಮಯ ಉಳಿವು
ಇಲ್ಲದೆ ಹೋದರೆ ನಮ್ಮಯ ಅಳಿವು

ಪರಿಸರಕೆಲ್ಲ ಒಡೆಯನು ಈತ
ವೃಕ್ಷರಾಜನೇ ಕಾಡಿನ ತಾತ
ಒಂಟಿ ಕಾಲಲಿ ನಿಂತಿರುವಾತ
ಸಾವಿರ ಕೈಗಳ ಪಡೆದಿರುವಾತ.

ಮರ ಕಡಿಯುವವ : ಇದೊಳ್ಳೆ ಕತೆ ಆತಲ್ಲ. (ಮಕ್ಕಳಿಗೆ ಕೈ ಮುಗಿದು) ಹುಡುಗ್ರ, ನೀವು ಓದೋದಕ್ಕೆ ಬಂದೋರಲ್ವ?

ಸುಧಾ : ಇನ್ನೆಂಟು ದಿನಕ್ಕೆ ನಮಗೆ ಪರೀಕ್ಷೆ ಇದೆ. ಅದಕ್ಕೆ ನಾವು ಓದಲಿಕ್ಕೆ ಅಂತಾನೆ ಬಂದೋರು.

ಮರ ಕಡಿಯುವವ : ಹಾಗಾದ್ರೆ ಓದಿಕೊಳ್ಳಿ ಹೋಗಿ. ನನಗೆ ಯಾಕೆ ತೊಂದ್ರೆ ಕೊಡತೀರ?

ಅನಿಲ : ಹಾಗಾದ್ರೆ ಹೇಳಿ, ನೀವು ಇಲ್ಲಿಗೆ ಯಾಕೆ ಬಂದಿದೀರಾ?

ಮರ ಕಡಿಯುವವ : ಹೇಳಿದ್ನಲ್ಲ. ಒಂದು ನಾಲ್ಕು ಹೊರೆ ಸೌದೆ ಮಾಡೋಣ ಅಂತ ಬಂದೆ. ಮರ ಚೆನ್ನಾಗಿ ಬೆಳೆದಿದೆ.

ಸುಧಾ : ಅಂದರೆ ಮರ ಕಡೀಲಿಕ್ಕೆ ಬಂದಿದೀರಾ?

ಮರ ಕಡಿಯುವವ : ಹೌದು, ನನ್ನ ಕಸುಬೇ ಇದು. ಮರ ಕಡಿಯೋದು. ಹೊರೆ ಕಟ್ಟೋದು. ಪೇಟೆಗೆ ಒಯ್ದು ಮಾರೋದು.

ಅನಿತಾ : ಪ್ರತಿ ದಿನ ನೀವು ಮರ ಕಡೀತೀರಾ?

ಮರ ಕಡಿಯುವವ : ಹೌದು. ಹೊಟ್ಟೆಪಾಡು ಕಳೀಬೇಕಲ್ಲ. ದಿನಾ ಕಡಿಯೋದು, ದಿನಾ ಮಾರೋದು.

ರಾಜ : ಎಷ್ಟು ಮರ ಕಡಿದಿದೀರಾ ಈವರೆಗೆ?

ಮರ ಕಡಿಯುವವ : ನಾನು ಒಬ್ನೆ ಅಲ್ಲ. ನನ್ನ ಹಾಗೇ ಬೇರೆ ಜನರೂ ಇದಾರೆ.

ಅನಿಲ : ಬೇರೆ ಜನ?

ಮರ ಕಡಿಯುವವ : ಹೌದು, ನಾನು ಉರುವಲಿಗೆ ಅಂತ ಕಡೀತೀನಿ. ಬೇರೆಯವರು ಹಲಗೆ, ತೊಲೆ ಮಾಡಲಿಕ್ಕೆ ಅಂತ ಕಡೀತಾರೆ. ಬೇರೆ ಕೆಲವರು ದೂರದ ಊರುಗಳಿಗೆ ಸಾಗಿಸಲಿಕ್ಕೆ ಅಂತ ಕಡೀತಾರೆ.



ಅನಿತಾ : ಎಲ್ರೂ ಮರ ಕಡಿಯೋರೆ?

ಮರ ಕಡಿಯುವವ : ಹೌದು. ನಾವು ಒಂದೊಂದೇ ಒಂದೊಂದೇ ಅಂತ ಈ ಸುತ್ತಮುತ್ತ ಇರೋ ಎಲ್ಲ ಮರಗಳನ್ನು ಕಡಿದು ಹಾಕಿದೀವಿ.

ಸುಧಾ : ಸುತ್ತಮುತ್ತ ಇರೋ ಎಲ್ಲ ಮರ. ಛೆ, ಛೆ, ಛೆ!

ಅನಿಲ : ಎಲ್ಲ ಮರ ಕಡಿದಾದ ಮೇಲೆ ಏನ್ ಮಾಡ್ತೀರ?

ಮರ ಕಡಿಯುವವ : ಎಲ್ಲ ಮರ ಕಡಿದಾದ ಮೇಲೆ ....ಮೇಲೆ....(ಏನೂ ಹೇಳಲು ತೋಚದೆ ಸುಮ್ಮನೆ ನಿಲ್ಲುವನು.)

ರಾಜ : ನೀವು ಎಲ್ಲ ಮರ ಕಡಿದಾದ ಮೇಲೆ ಮತ್ತೆ ಕಡೀಲಿಕ್ಕೆ ಇಲ್ಲಿ ಮರ ಇರೋದಿಲ್ಲ.

ಸುಧಾ : ತಂಪಾಗಿ ಗಾಳಿ ಬೀಸೋದಿಲ್ಲ.

ಅನಿಲ : ನೆರಳು ಬೇಕು ಅಂದ್ರೂ ಸಿಗೋದಿಲ್ಲ.

ಅನಿತಾ : ಗೇರ್ ಗೇರ್ ಮಂಗಣ್ಣ ಕೊಂಬೆಯಿಂದ ಕೊಂಬೆಗೆ ಹಾರೋದಿಲ್ಲ.

ರಾಜ : ಅಳಿಲು ರೆಂಬೆ ಮೇಲೆ ಓಡಾಡೋದಿಲ್ಲ.

ಅನಿಲ : ಕೋಗಿಲೆ ಕೂಗೋದಿಲ್ಲ.

ಅನಿತಾ : ಹೂವು ಅರಳೋದಿಲ್ಲ.

ರಾಜ : ಹಣ್ಣು ಉದುರೋದಿಲ್ಲ.

ಸುಧಾ : ಎಲೆ ಚಿಗುರೋದಿಲ್ಲ.

ಅನಿಲ : ಮಳೆ ಬೀಳೋದಿಲ್ಲ.

(ಒಬ್ಬೊಬ್ಬರಾಗಿ ಮರ ಕಡಿಯುವವನ ಸುತ್ತ ನಿಂತು ಧ್ವನಿ ಎತ್ತರಿಸಿ ಹೇಳತೊಡಗಲು ಅವನು ಗಾಬರಿಯಾಗುತ್ತಾನೆ. ಕಂಗಾಲಾಗುತ್ತಾನೆ. ಮಕ್ಕಳು ಥಟ್ಟನೆ ಮಾತು ನಿಲ್ಲಿಸಿ ದೂರ ಸರಿಯುತ್ತಾರೆ. ಎಲ್ಲರ ಮುಖದ ಮೇಲೆ ಚಿಂತೆ, ವ್ಯಾಕುಲ. ಮರ ಕಡಿಯುವವ ಕೈಯಲ್ಲಿ ಕೊಡಲಿ ಹಿಡಿದು ಒಬ್ಬೊಬ್ಬರ ಬಳಿ ಹೋಗಿ ನಿಲ್ಲುತ್ತಾನೆ. ವಿಷಾದದ ದನಿಯಲ್ಲಿ ಅವರು ಮತ್ತೆ ಹೇಳುತ್ತಾರೆ.)

ತಂಪು ಗಾಳಿ ಬೀಸೋದಿಲ್ಲ
ನೆರಳು ಸಿಗೋದಿಲ್ಲ
ಕೋಗಿಲೆ ಕೂಗೋದಿಲ್ಲ
ಹೂವು ಅರಳೋದಿಲ್ಲ
ಹಣ್ಣು ಉದುರೋದಿಲ್ಲ
ಎಲೆ ಚಿಗುರೋದಿಲ್ಲ
ಮಳೆ ಬೀಳೋದಿಲ್ಲ

ಮರ ಕಡಿಯುವವ : ಹಾಗಾದ್ರೆ....ಹಾಗಾದ್ರೆ....ನಾನು ಹೊಟ್ಟೆಪಾಡಿಗೆ ಏನು ಮಾಡಲಿ?

ರಾಜ : ಬೇರೆ ಕೆಲಸ ಮಾಡಿ. ಕೂಲಿ ಮಾಡಿ. ತರಕಾರೀ ಬೆಳೀರಿ. ಹಾಲು ಮಾರಿ.

ಸುಧಾ : ಮರಾ ಮಾತ್ರ ಕಡೀಬೇಡಿ.

ಮರ ಕಡಿಯುವವ : ಆಯ್ತು. ಮಕ್ಕಳ ಮನಸ್ಸನ್ನ ನೋಯಿಸೋದು ಅಂದ್ರೆ ನನಗೆ ಆಗೋದಿಲ್ಲ. ನಾನು ಎರಡು ಹೊತ್ತಿನ ಊಟಕ್ಕೆ ಮರ ಕಡೀತಾ ಬಂದೆ. ನನ್ನ ಹಾಗೇ ಉಳಿದೋರು ಕೂಡ ಬೇರೆ ಬೇರೆ ಉದ್ದೇಶಗಳಿಗೆ ಮರಗಳನ್ನು ಕಡದ್ರು...ಆದ್ರೆ ನಮ್ಮಿಂದ ಇಷ್ಟೆಲ್ಲ ಅನಾಹುತ ಆಯ್ತೆ? ನಾವು ಇನ್ನು ಮರ ಕಡಿಯೋದಿಲ್ಲ. ನಾನಿನ್ನು ಬೇರೆ ಕೆಲಸ ಮಾಡುತ್ತೇನೆ. ನೀವು ನನ್ನ ಕಣ್ಣು ತೆರೆಸಿದ್ರಿ. ನಿಮಗೆಲ್ಲ ಒಳ್ಳೇದಾಗಲಿ.

(ಮರ ಕಡಿಯುವವ ನಿರ್ಗಮಿಸುವನು. ನಾಲ್ವರೂ ಅವನನ್ನೇ ನೋಡುತ್ತ ನಿಂತಿದ್ದು, ನಂತರ ಏನೋ ತೃಪ್ತಿ ಸಂತಸದಿಂದ ಮತ್ತೆ ಹಿಂದಿನ ಸ್ಥಾನಕ್ಕೆ ಬಂದು ಕುಳಿತು ಪುಸ್ತಕ ತೆರೆದು ಓದಿನಲ್ಲಿ ಮಗ್ನರಾಗುವರು. ಹಕ್ಕಿಗಳ ಇಂಚರ ಕೇಳಿಸುವುದು. ಗಾಳಿ ಬೀಸುವುದು.)

– ತೆರೆ –

ದೃಶ್ಯ : ನಾಲ್ಕು

(ಹಿಂದಿನಂತೆಯೆ ಶಾಲೆಯ ಗಂಟೆಯ ಸದ್ದು. ಡಬ್ಬಿ ಹಿಡಿದ ಸುಧಾ, ಅನಿತಾ, ಅನಿಲ, ರಾಜ ಪ್ರವೇಶ. ಊಟ, ಮಾತು ಸಾಗಿದೆ. ನಡುವೆ ಕೋತಿ, ಹಕ್ಕಿಗಳಿಗೆ ತಾವು ತಿನ್ನುವುದನ್ನು ಮಕ್ಕಳು ಕೊಡುತ್ತಾರೆ. ಮಕ್ಕಳ ವರ್ತನೆಯಲ್ಲಿ ನಿರುತ್ಸಾಹ, ಬೇಸರ.)



ಸುಧಾ : ಈವತ್ತು ಏನೋ ಬೇಸರ ಅಲ್ವ?

ಅನಿತಾ : ನಾಳೆಯಿಂದ ಬೇಸಿಗೆ ರಜೆ. ಮತ್ತೆ ಒಂದೆರಡು ತಿಂಗಳು ನಾವು ಈ ಕಡೆ ಬರೋದಕ್ಕೆ ಆಗೋದಿಲ್ಲ. ಅದಕ್ಕೆ ಬೇಸರ.

ರಾಜ : ಹೀಗೆ ಕೂತು ಊಟ ಮಾಡಲಿಕ್ಕೂ ಆಗೋದಿಲ್ಲ.

ಅನಿಲ : ನಾವು ಒಟ್ಟಿಗೆ ಸೇರೋ ಹಾಗೂ ಇಲ್ಲ. ರಜದಲ್ಲಿ ಎಲ್ಲೆಲ್ಲಿಗೋ ಹೋಗಬೇಕು ಅಂತ ಅಪ್ಪ ಅಮ್ಮ ಮಾತಾಡಿಕೋತಿದ್ರು.

ಸುಧಾ : ನಮ್ಮಲ್ಲೂ ಅಷ್ಟೆ. ಅಜ್ಜಿ ಕಾಗದ ಬರೆದಿದಾರೆ, ರಜೇನಲ್ಲಿ ಬನ್ನಿ ಅಂತ. ನಾವೂ ಊರಿಗೆ ಹೋಗತಿದೀವಿ.

ಅನಿತಾ : ಗೇರ್ ಗೇರ್ ಮಂಗಣ್ಣ, ತಗೋ ಈ ಬಾಳೆಹಣ್ಣು. ನಾಳೆಯಿಂದ ನಮ್ಮ ದಾರಿ ಕಾಯಬೇಡ ಆಯ್ತ?

ಅನಿಲ : ಮೈನಾ, ತಗೋ. ಇಷ್ಟೂ ಕಾಳು ನಿನಗೆ. ರಜಾ ದಿನಗಳಲ್ಲಿ ಬಿಡುವಾದರೆ ಮತ್ತೆ ಕಾಳು ತಗೊಂಡು ಬರತೀನಿ.

ಸುಧಾ : ನಾಳೆ ಈ ಕೋತಿ, ಅಳಿಲು, ಹಕ್ಕಿಗಳಿಗೆಲ್ಲ ಬೇಸರವಾಗುತ್ತೆ. ಇಷ್ಟು ಹೊತ್ತಿಗೆ ಇಲ್ಲಿಗೆ ಬಂದು ನಮ್ಮ ದಾರಿ ಕಾಯುತ್ವೋ ಏನೋ, ಪಾಪ.

ರಾಜ : ಇವುಗಳಿಗೆ ಮಾತ್ರ ಅಲ್ಲ. ಈ ಮರಕ್ಕೂ ಬೇಸರವಾಗಬಹುದು.

ಅನಿಲ : ಖಂಡಿತ. ನಾವು ಬಂದ ಕೂಡಲೇ ಇದರ ರೆಂಬೆಗಳು ಬನ್ನಿ ಕೂತ್ಕೊಳ್ಳಿ ಅನ್ನೋ ಹಾಗೆ ತೋಳು ಬೀಸಿ ನಮ್ಮನ್ನ ಕರೀತಾವೆ,ಅಲ್ವ?

ರಾಜ : ನಮ್ಮ ಆಯಾಸ ಪರಿಹಾರ ಆಗಲಿ ಅಂತ ಗಾಳಿ ಬೀಸುತ್ತೆ.

ಅನಿತಾ : ಇದೆಲ್ಲ ಮರಕ್ಕೆ ಸಂತೋಷ ಆಗುತ್ತೆ ಅನ್ನೋದರ ಸಂಕೇತ. ಜೊತೆಗೆ ಅದೂ ನಮ್ಮನ್ನ ಪ್ರೀತಿಸುತ್ತೆ ಅನ್ನೋದರ ಅರ್ಥ.

ರಾಜು : ಖಂಡಿತ. ನೀನು ಸರಿಯಾಗಿ ಹೇಳಿದಿ ನೋಡು.

ಅನಿಲ : ಇದನ್ನೆಲ್ಲ ನೆನಸಿಕೊಂಡ್ರೆ ಬೇಸರವಾಗುತ್ತೆ. ಈ ಬೇಸಿಗೆ ರಜೆ ಬರದೇ ಇದ್ದಿದ್ರೆ ಆಗತಿತ್ತು.

ಸುಧಾ : ಶಾಲೆ ಇಲ್ಲದಿದ್ರೆ ದಿನಾ ಇಲ್ಲಿಗಂತೂ ಬಂದು ಹೋಗಲಿಕ್ಕೆ ಆಗೋದಿಲ್ಲ.

ಅನಿಲ : ನಾವು ಊರಲ್ಲೂ ಇರೋದಿಲ್ಲವಲ್ಲ. ಬಂದು ಹೋಗೋದು ಹೇಗೆ?

ಅನಿತಾ : ಇರಲಿ, ನಾವು ರಜೆ ಮುಗಿಸಿಕೊಂಡು ಮತ್ತೆ ಬರತೀವಲ್ಲ.

ರಾಜ : ಕೋತಿ, ಅಳಿಲು, ಹಕ್ಕಿ, ಈ ಮರ ನಮ್ಮನ್ನು ಖಂಡಿತ ಮರೆಯೋದಿಲ್ಲ.



ಸುಧಾ : ನಮಗೂ ಇವುಗಳನ್ನು ಮರೆಯೋದಕ್ಕೆ ಆಗೋದಿಲ್ಲ.

(ಶಾಲೆಯ ಗಂಟೆ ಕೇಳಿಸುವುದು. ನಾಲ್ವರೂ ಡಬ್ಬಿ ಹಿಡಿದು ಹೊರಡುವರು.)

ರಾಜ : ಗೇರ್ ಗೇರ್ ಮಂಗಣ್ಣ, ಹೋಗಿ ಬರತೀವಿ, ಟಾ ಟಾ.

ಸುಧಾ : ಮೈನಾ ಹಕ್ಕಿ, ಮತ್ತೆ ಬರತೀವಿ, ಬಾಯ್.

ಅನಿಲ : ಮರೀಬೇಡೀ ನಮ್ಮನ್ನ.

ಅನಿತಾ : ಎರಡೇ ತಿಂಗಳು. ಮತ್ತೆ ಬರತೀವಿ.

ರಾಜ : ತಾತ....ಕಾಡಿನ ತಾತ...ನಿನಗೂ ಟಾ ಟಾ, ಬೈ ಬೈ.

ಸುಧಾ : ನಾವು ಬರೋವಾಗ ಮೈ ತುಂಬ ಹೂ ಬಿಟ್ಟಿರಬೇಕು... ಟಾ ಟಾ...ಟಾ ಟಾ...

(ಮಕ್ಕಳು ಕೈ ಬೀಸುತ್ತ ಹೋಗುವರು. ಕೋತಿ, ಅಳಿಲು, ಮೈನಾ ಎಲ್ಲವೂ ಬೇಸರದಿಂದ ನೋಡುತ್ತ ನಿಂತಿರುವುವು.)

– ತೆರೆ –

ದೃಶ್ಯ : ಐದು

(ಈ ಮರದ ಹತ್ತಿರವೇ ಇರುವ ಬೇರೊಂದು ಪ್ರದೇಶ. ಮೂವರು ಹಿರಿಯರು ಪ್ರವೇಶಿಸುವರು.)

ಹಿರಿಯ 1 : ನೀವು ಏನೇ ಹೇಳಿ, ನಮ್ಮೂರಲ್ಲಿ ತುಂಬಾ ಪ್ರಶಾಂತವಾಗಿರುವ ಪ್ರದೇಶ ಅಂದ್ರೆ ಇದೊಂದೇ.

ಹಿರಿಯ 2 : ಹೌದು, ಹೌದು. ಮುಖ್ಯವಾಗಿ ಇದು ಊರ ಹೊರಗಿದೆ ನೋಡಿ. ಅಲ್ಲದೇ ಎತ್ತರವಾದ ಪ್ರದೇಶ ಬೇರೆ.

ಹಿರಿಯ 3 : ಈ ಶಾಲೆ ಬಿಟ್ರೆ ಸುತ್ತಮುತ್ತ ಬೇರೆ ಕಟ್ಟಡಗಳಿಲ್ಲ. ಸಧ್ಯ ಇಲ್ಲಿ ಯಾವುದೇ ಕಾರ್ಖಾನೆ ತಲೆ ಎತ್ತಿಲ್ಲ.

ಹಿರಿಯ 1 : ಈ ಕಡೆ ಯಾವುದೇ ಹೆದ್ದಾರಿ ಇಲ್ಲದಿರೋದರಿಂದ ವಾಹನ ಸಂಚಾರಾನೂ ಕಡಿಮೆ ನೋಡಿ.

ಹಿರಿಯ 3 : ಹಾಗೇನೇ ಆ ಮರ ಅಲ್ಲಿರೋದು ಈ ಜಾಗಕ್ಕೊಂದು ಶೋಭೆ ಬರೋದಿಕ್ಕೆ ಕಾರಣ.

ಹಿರಿಯ 2 : ಹಾಂ, ಹೌದು ಹೌದು. ಇದು ನನ್ನ ಗಮನಕ್ಕೆ ಬಂದಿರಲಿಲ್ಲ. ಅಂದ ಹಾಗೆ ಈ ಮರಕ್ಕೆ ಎಷ್ಟು ವರ್ಷಗಳಾಗಿರಬಹುದೋ?

ಹಿರಿಯ 1 : ಕಡಿಮೆ ಅಂದರೆ ನೂರು ನೂರಾ ಹತ್ತು ವರ್ಷ ಆಗಿರಬಹುದು. ಅದರ ಗಾತ್ರ, ಕೊಂಬೆ ರೆಂಬೆ ಚಾಚಿಕೊಂಡಿರೋ ರೀತಿ ನೋಡಿದ್ರೆ ಈ ಮರ ತುಂಬಾ ಹಳೇದು. ಈ ಸುತ್ತಮುತ್ತ ಇಂತಹ ಮರ ಮತ್ತೊಂದಿಲ್ಲ.

ಹಿರಿಯ 3 : ನೂರು ನೂರಾ ಹತ್ತು ವರ್ಷ! ಅಬ್ಬ! ಈ ಮರ ಇಲ್ಲಿ ನಡೆದಿರೋ ಅವೆಷ್ಟು ಘಟನೆಗಳನ್ನು ಕಂಡಿದೆಯೋ?

ಹಿರಿಯ 1 : ಅದೆಷ್ಟು ಬಿಸಿಲು, ಮಳೆ, ಚಳಿಗಾಲಗಳನ್ನು ಕಂಡಿದೆಯೋ?

ಹಿರಿಯ 2 : ಎಷ್ಟು ಸಿಡಿಲು ಬಿರುಗಾಳಿಗಳನ್ನು ಇದು ಎದುರಿಸಿದೆಯೋ?

ಹಿರಿಯ 1 : ಅಲ್ಲ, ಈ ಗಾತ್ರದ ಮರಾನ ಯಾರೂ ಮುಟ್ಟದಿರೋದು ಆಶ್ಚರ್ಯ ಅಲ್ವೇ?

ಹಿರಿಯ 2 : ಹೌದಲ್ಲ. ಆ ಶ್ರೀರಾಮ ಮಂದಿರದ ಹಿಂದೆ ಇದ್ದ ಮರಾನ ರಾತ್ರೋ ರಾತ್ರೆ ಕಡಿದು ಹಾಕಿದ್ರು.



ಹಿರಿಯ 3 : ಆಸ್ಪತ್ರೆ ಹಿಂದೆ ಇದ್ದ ದೊಡ್ಡ ಮರ ಬುಡ ಸಮೇತ ಕಾಣೆಯಾಯ್ತು.

ಹಿರಿಯ 1 : ಆ ಒಂದೊಂದು ಮರಾನ ಕದ್ದು ಸಾಗಿಸ್ದೋರು ಎಪ್ಪತ್ತು ಸಾವಿರ, ಎಂಬತ್ತು ಸಾವಿರ, ಒಂದು ಲಕ್ಷ ಅಂತಾ ದುಡಿದುಬಿಟ್ರು.

ಹಿರಿಯ 2 : ಎಪ್ಪತ್ತು, ಎಂಬತ್ತು! ಒಂದು ಲಕ್ಷ!

ಹಿರಿಯ 1 : ಹೌದು ಸ್ವಾಮಿ, ನೋಡಲಿಕ್ಕೆ ಇದು ಬರೀ ಮರ. ಕಡಿದು ಕೊಯ್ದು ಮಾರಿದ್ರೆ ಬೇರು ತೊಗಟೆಗೆಲ್ಲ ಹಣ ಬರತ್ತೆ. ಹಲಗೆ, ತೊಲೆ, ರೀಪು, ಪಕಾಶೆ ಅಂತಾ ಮಾಡಿ ಮಾರಿದ್ರೆ ಲಕ್ಷಾಂತರ ರೂಪಾಯಿ.

ಹಿರಿಯ 2 : ಅಂದ ಮೇಲೆ ನೀವು ಹೇಳಿದ ಹಾಗೆ ಈ ಮರ ಉಳಿದಿರೋದು ಆಶ್ಚರ್ಯವೇ.

ಹಿರಿಯ 1: ಆಶ್ಚರ್ಯ ಮಾತ್ರ ಅಲ್ಲ, ಪರಮಾಶ್ಚರ್ಯ ಅನ್ನಿ.



ಹಿರಿಯ 3 : ಅಷ್ಟೇ ಅಲ್ಲ. ಊರಲ್ಲಿರೋ ಎಲ್ಲ ಮರಗಳೂ ಹೋದ ಮೇಲೆ ಈ ಮರಾನಾದ್ರೂ ಉಳಿಸಿ ಅಂತಾ ಊರಿನೋರು ಸರ್ಕಾರಕ್ಕೆ ಅರ್ಜಿ ಹಾಕಿದಾರೆ.

ಹಿರಿಯ 1 : ಹೇಗದು ಮರ ಉಳಿಸೋದು?

ಹಿರಿಯ 2 : ಅದೂ ತೀರ್ಮಾನ ಆಗಿದೆಯಂತೆ. ನನಗೆ ಗೊತ್ತಿರೋ ಹಾಗೆ ಈ ಮರದ ಸುತ್ತ ಒಂದು ತಂತಿ ಬೇಲಿ ಹಾಕಿ ಒಬ್ಬ ಕಾವಲುಗಾರನನ್ನು ನೇಮಿಸ್ತಾರಂತೆ. ಅವನಿಗೆ ಸರ್ಕಾರ ಸಂಬಳ ಕೊಡುತ್ತೆ. ಮರದ ಹತ್ತಿರ ಯಾರೂ ಹೋಗದ ಹಾಗೆ ಅವನು ನೋಡಕೋಬೇಕು.

ಹಿರಿಯ 3 : ಅಷ್ಟರಲ್ಲಿ ಯಾರಾದ್ರೂ ಮರಾನ ಕಡಿದ್ರೆ.....

ಹಿರಿಯ 2 : ಅಷ್ಟರಲ್ಲಿ ಬೇಡಪ್ಪ, ಆಮೇಲೆ ಈ ಕಾವಲುಗಾರನನ್ನೇ ಒಳಗೆ ಹಾಕಿಕೊಂಡು ಮರ ಕಡಿದ್ರೆ?

ಹಿರಿಯ 1 : ಏನೂ ಆಗಬಹುದು, ಅಲ್ವೇ.

ಹಿರಿಯ 3 : ಆಗಬಹುದು. ಲಕ್ಷಾಂತರ ರೂಪಾಯಿ ಸಿಗುತ್ತೆ ಅಂದ್ರೆ ಜನ ಏನೂ ಮಾಡಬಹುದು.

ಹಿರಿಯ 2 : ಜನರ ಸುದ್ದಿ ಯಾಕೆ.....ಬನ್ನಿ ಇಲ್ಲಿ.

(2ನೇ ಹಿರಿಯ ಉಳಿದಿಬ್ಬರ ಕಿವಿಯಲ್ಲಿ ಏನೋ ಹೇಳುವನು. ಅವರು ಪ್ರಾರಂಭದಲ್ಲಿ ಒಪ್ಪುವುದಿಲ್ಲ. ಕ್ರಮೇಣ ಮೂವರೂ ಒಂದು ನಿರ್ಧಾರಕ್ಕೆ ಬರುತ್ತಾರೆ. ತುಸು ಉತ್ಸಾಹದಿಂದಲೇ ನಿರ್ಗಮನ.)

– ತೆರೆ –

ದೃಶ್ಯ : ಆರು

(ದೂರದಲ್ಲಿ ಒಂಟಿ ಮರ. ಹಕ್ಕಿಗಳ ಇಂಚರವಿಲ್ಲ. ತಂಗಾಳಿ ಇಲ್ಲ. ಮರದ ಮುಂದೆ ಒಂದು ತಂತಿ ಬೇಲಿ. ಒಂದು ಗೇಟು. ಗೇಟಿನ ಬಳಿ ಬಂದೂಕು ಇರಿಸಿಕೊಂಡು ಕಾವಲುಗಾರ ಕುಳಿತಿದ್ದಾನೆ. ಶಾಲೆಯ ಗಂಟೆಯ ಸಮಯ. ಸುಧಾ, ರಾಜ, ಅನಿಲ, ಅನಿತಾ ಉಳಿದ ಮಕ್ಕಳು ಧಾವಿಸಿ ಬರುತ್ತಾರೆ.)

ಗೇರ್ ಗೇರ್ ಮಂಗಣ್ಣ
ಕಡ್ಲೆಕಾಯಿ ತಿನ್ನಣ್ಣ
ನಾನೂ ನೀನೂ ಸೇರೋಣ
ಮರಕೋತಿ ಆಟ ಆಡೋಣ

ರಾಮನ ಅಳಿಲೇ ಬಾರಣ್ಣ
ಅತ್ತಿ ಹಣ್ಣು ತಾರಣ್ಣ
ನನಗೊಂದಿಷ್ಟು ಕೊಡಣ್ಣ
ಇಬ್ಬರು ಸೇರಿ ಆಡೋಣ

ಹಕ್ಕಿ ಹಕ್ಕಿ ಬಣ್ಣದ ಹಕ್ಕಿ
ಕೆಂಪನೆ ಕೊಕ್ಕಿನ ಹಸಿರಿನ ಹಕ್ಕಿ
ಬಿಳುಪಿನ ಬಣ್ಣದ ಓ ಬೆಳ್ಳಕ್ಕಿ
ನನ್ನೊಡನಾಡಲು ಬಾ ಬಾ ಹಕ್ಕಿ.

(ಚಪ್ಪಾಳೆ ತಟ್ಟುತ್ತ, ಕುಣಿಯುತ್ತ ಬಂದ ಮಕ್ಕಳು ಬೇಲಿಯ ಬಳಿ ಬಂದು ಗಕ್ಕನೆ ನಿಲ್ಲುತ್ತಾರೆ.)

ರಾಜ : ಏನಿದು ಬೇಲಿ? ಹಿಂದೆ ಇರಲಿಲ್ಲ. ಈಗ ಯಾರು ಕಟ್ಟಿದ್ದು?

ಸುಧಾ : ಬೇಲಿ ಮಾತ್ರ ಅಲ್ಲ. ಅಲ್ಲಿ ನೋಡು ಕಾವಲುಗಾರ.

ಅನಿತಾ : ಹೌದಲ್ಲ. ಇದೆಲ್ಲ ಏನು? ಯಾವಾಗಿನಿಂದ?

ಅನಿಲ : ಯಾರು ಮಾಡಿದ್ದು ಇದನ್ನ? ಯಾಕೆ ಬೇಲಿ ಹಾಕಿದ್ರು?

(ಕಾವಲುಗಾರ ಮಕ್ಕಳನ್ನು ನೋಡಿದ್ದೇ ಬಂದೂಕಿನ ಸಹಿತ ಎದ್ದು ಬರುತ್ತಾನೆ.)

ಕಾವಲುಗಾರ : ಮಕ್ಕಳೇ, ಅಲ್ಲೇ ನಿಲ್ಲಿ. ಮುಂದೆ ಬರಬೇಡಿ.

ಸುಧಾ : ಈ ಬೇಲಿ ಹಾಕಿದ್ದು ಯಾರು?

ರಾಜ : ಈ ಬೇಲೀನ ಇಲ್ಲಿ ಯಾಕೆ ಹಾಕಿದಾರೆ?

ಅನಿಲ : ಹಿಂದೆ ಇಲ್ಲಿ ಬೇಲಿ ಗೀಲಿ ಇರಲಿಲ್ಲ.

ಅನಿತಾ : ನೀವೂ ಇರಲಿಲ್ಲ.

ಕಾವಲುಗಾರ : ಊರಲ್ಲಿರೋ ಮರಗಳನ್ನು ಹಣದಾಸೆಗೆ ಕದ್ದು ಕಡಿದು ಮಾರಿದ ಮೇಲೆ ಈ ಒಂದು ಮರ ಆದ್ರೂ ಉಳೀಲಿ ಅಂತಾ ಸರ್ಕಾರ ಈ ವ್ಯವಸ್ಥೆ ಮಾಡಿದೆ. ನಾನು ಇಲ್ಲಿ ಕಾವಲುಗಾರ.



ರಾಜ : ನಾವು ಮರ ಕಡೀಲಿಕ್ಕೆ ಬಂದೋರಲ್ಲ. ಮರದ ಕೆಳಗೆ ಕೂತು ಊಟ ಮಾಡೋಕೆ ಬಂದೋರು.

ಸುಧಾ : ಈ ಮರದ ಮೇಲೆ ನಮಗೆ ತುಂಬಾ ಪ್ರೀತಿ.

ಅನಿಲ : ಹಿಂದೆ ನಾವು ಎಷ್ಟೋ ಸಾರಿ ಈ ಮರದ ಸುತ್ತ ಹಾಡಿದ್ದೀವಿ, ಕುಣಿದಿದ್ದೀವಿ.

ಕಾವಲುಗಾರ : ಅದೆಲ್ಲ ನನಗೆ ಗೊತ್ತಿಲ್ಲ! ಯಾರೂ ಒಳಗೆ ಹೋಗಬಾರದು. ಇಲ್ಲೇ ಕೂತು ಊಟ ಮಾಡಲಿಕ್ಕೆ ನನ್ನ ಅಡ್ಡಿ ಇಲ್ಲ. ಆದರೆ ಒಳಗೆ ಮಾತ್ರ ಹೋಗಬಾರದು.

(ಕೊಂಚ ಹೊತ್ತು ಯೋಚಿಸಿ ಸುಧಾ, ಅನಿತಾ, ರಾಜ, ಅನಿಲ ಗೇಟಿನ ಈ ಬದಿಗೆ ಕುಳಿತು ಡಬ್ಬಿ ತೆಗೆಯುವರು. ಕಾವಲುಗಾರ ಬಂದೂಕನ್ನು ಹೆಗಲಿಗೆ ಏರಿಸಿ ಗೇಟಿನ ಬಳಿ ಗಸ್ತು ತಿರುಗುವನು.)

ಮಕ್ಕಳು : (ಕೈಯಲ್ಲಿ ತುತ್ತು ಹಿಡಿದು)
ಗೇರ್ ಗೇರ್ ಮಂಗಣ್ಣ
ಹಕ್ಕಿ ಹಕ್ಕಿ ಬಣ್ಣದ ಹಕ್ಕಿ
ಅಳಿಲೇ ಅಳಿಲೇ ರಾಮನ ಅಳಿಲೇ

(ಎಂದು ಕೂಗಿ ಐದಾರು ನಿಮಿಷ ಆಸೆಯಿಂದ ಕಾಯುವರು. ಮತ್ತೆ ಮತ್ತೆ ಕೂಗುವರು. ಕೋತಿ ಹಕ್ಕಿ ಬರುವುದಿಲ್ಲ.)

ಅನಿತಾ : ನನಗೆ ಊಟ ಬೇಕಿರಲಿಲ್ಲ. ನಾನು ಡಬ್ಬಿ ತಂದಿದ್ದೇ ಕೋತಿಗೆ ಅಂತ, ಪಾರಿವಾಳಕ್ಕೆ ಅಂತ. ಎಷ್ಟು ಕರದ್ರೂ ಅವು ಬರ್ತಾ ಇಲ್ಲ.

ಸುಧಾ : ನಾನೂ ಅಷ್ಟೆ. ನನ್ನ ಅಳಿಲು ಎಲ್ಲಿ ಹೋಯ್ತೋ ಏನೋ?

ರಾಜ : ಅಳಿಲೂ ಇಲ್ಲ, ಕೋತಿನೂ ಇಲ್ಲ.

ಅನಿಲ : ಊಟ ಮಾಡಲಿಕ್ಕೆ ಮನಸ್ಸೇ ಆಗ್ತಿಲ್ಲ.

(ಊಟದ ಡಬ್ಬಿಯನ್ನು ಮುಚ್ಚಿ ನಾಲ್ವರೂ ಮರವನ್ನೇ ನೋಡುತ್ತ ಕೂರುವರು.)

ರಾಜ : ಒಂದು ವಿಷಯ............

ಸುಧಾ
ಅನಿತಾ
ಅನಿಲ } : ...ಏನು?

ರಾಜ : ಮರ ನೋಡಿ, ಏನೋ ಬದಲಾವಣೆ ಕಾಣತ್ತೆ, ಅಲ್ವಾ?

ಸುಧಾ : ಹೌದು, ತೋಳು ಬೀಸಿ ಕರೀತಾ ಇದ್ದ ಅದರ ರೆಂಬೆ ಕೊಂಬೆಗಳೆಲ್ಲ ಸುಮ್ಮನೆ ನಿಂತು ಬಿಟ್ಟಿವೆ.



ಅನಿತಾ : ಸಾವಿರ ಎಲೆಗಳ ಕುಲುಕಾಟ ಕೂಡ ಇಲ್ಲ.

ಅನಿಲ : ಆ ಕಡೆಯಿಂದ ತಂಪಾದ ಗಾಳಿ ಬೀಸ್ತಾ ಇಲ್ಲ.

ಸುಧಾ : ಗೇರ್ ಗೇರ್ ಮಂಗಣ್ಣ ಕಣ್ಣಿಗೆ ಬೀಳ್ತಾ ಇಲ್ಲ.

ಅನಿತಾ : ಅಳಿಲೂ ಇಲ್ಲ. ಹಕ್ಕಿಗಳೂ ಇಲ್ಲ.

ರಾಜು : ಮರಕ್ಕೆ ಜೀವ ಇಲ್ಲ.

ಸುಧಾ : ಇದು ನಾವು ಹಿಂದೆ ನೋಡ್ತಿದ್ದ ಮರ ಅಲ್ಲ.

ರಾಜ : ಆ ಮರ ಗಾಳಿಗೆ ತೊನೆದಾಡೋದು.

ಅನಿಲ : ಅದರ ಎಲೆಗಳಲ್ಲಿ ಎಂಥಾ ಹಸಿರು ಇರೋದು.

ಸುಧಾ, ಅನಿತಾ : ಹೌದು, ಇದು ಆ ಮರ ಅಲ್ಲ.

ರಾಜ : ನೋಡೋಣ ಬನ್ನಿ. ಮತ್ತೂ ಒಂದ್ಸಾರಿ ಪ್ರಯತ್ನ ಮಾಡೋಣ.

(ಎಲ್ಲರೂ ಮತ್ತೆ ಕಾವಲುಗಾರನ ಬಳಿ ಹೋಗುವರು.)

ರಾಜ : ಮಾಮ.

ಕಾವಲುಗಾರ : ಏನು?

ರಾಜ : ನಾವು ಒಂದ್ಸಾರಿ ಒಳಗೆ ಹೋಗ್ತೇವೆ. ಅಲ್ಲಿ ಕೂತು ತಂದಿರೋ ಊಟ ಮಾಡ್ತೇವೆ. ಹಾಗೇ ತಿರುಗಿ ಬರ್ತೇವೆ ಮಾಮ.

ಸುಧಾ : ಇಲ್ಲಿ ಬಿಸಿಲಲ್ಲಿ ಕೂತು ಊಟ ಮಾಡಲಿಕ್ಕೆ ಆಗೋಲ್ಲ ಮಾಮ.

ಅನಿಲ : ನಾವು ಹಿಂದೆ ಊಟ ಮಾಡ್ತಿದ್ದಿದ್ದೇ ಅಲ್ಲಿ ಕೂತು.

ಕಾವಲುಗಾರ : ಆಗೋದಿಲ್ಲ ಅಂತಾ ಹೇಳಿದ್ನಲ್ಲ. ನೀವು ನನ್ನ ತಲಿ ತಿನ್ನಬೇಡಿ, ಹೋಗಿ.

ರಾಜ : ನಾವು ಅಲ್ಲಿಂದ ಒಂದೇ ಒಂದು ಹುಲ್ಲಿನ ಎಸಳು ತರೋದಿಲ್ಲ.

ಸುಧಾ : ಬಾಡಿ ಬಿದ್ದಿರೋ ಎಲೆನೂ ನಮಗೆ ಬೇಡ ಮಾಮಾ.

ಅನಿಲ : ಮರಾನ ಕೈಯಿಂದ ಕೂಡ ಮುಟ್ಟೋದಿಲ್ಲ ಮಾಮಾ.

ಕಾವಲುಗಾರ : ಏಯ್ ಮಕ್ಕಳಾ, ನೀವು ಇಲ್ಲಿಂದ ಹೋಗ್ತೀರೋ ಇಲ್ವೋ? ನಡೀರಿ. ಹುಂ, ನಡೀರಿ...ದೂರ...ದೂರ....

(ಕೆಟ್ಟದ್ದಾಗಿ ಬೈಯುತ್ತ ಹೊಡೆಯಲು ಕೈ ಎತ್ತುತ್ತ ಮಕ್ಕಳನ್ನು ಗೇಟಿನಿಂದ ದೂರ ಅಟ್ಟುವನು.)

ರಾಜ : ಇಲ್ಲ, ನಾವು ಹೆದರಿಕೊಂಡು ಸುಮ್ನೇ ಇರಬಾರದು. ಬನ್ನಿ, ಏನಾದರೂ ಮಾಡಲಿಕ್ಕೆ ಆಗುತ್ತೋ ನೋಡೋಣ.

(ನಾಲ್ವರು ಕೊಂಚ ದೂರ ಬಂದು ನಿಲ್ಲುವರು. ಮಕ್ಕಳು ದೂರ ಹೋದರೆಂದು ಕಾವಲುಗಾರ ಕಾವಲು ನಿಲ್ಲಿಸಿ, ಗೇಟಿನ ಬಳಿ ಇರಿಸಿದ ಸ್ಟೂಲಿನ ಮೇಲೆ ಕೂರುವನು. ಕ್ರಮೇಣ ಅಲ್ಲಿಯೇ ತೂಕಡಿಸಿ ನಿದ್ದೆಹೋಗುತ್ತಾನೆ. ಗೊರಕೆ ಹೊಡೆಯುತ್ತಾನೆ. ಸುಧಾ, ಅನಿಲ, ಅನಿತಾ, ರಾಜ ಇದನ್ನು ಗಮನಿಸುತ್ತಾರೆ. ನಿಧಾನವಾಗಿ ಗೇಟು ತೆರೆದುಕೊಂಡು ಒಳಗೆ ಹೋಗುತ್ತಾರೆ. ಮರದ ಬಳಿ ಹೋಗುತ್ತಾರೆ. ಅವರಿಗೆ ನಿರಾಶೆಯಾಗುತ್ತದೆ, ಸಂಕಟವಾಗುತ್ತದೆ. ಕೈ ಸನ್ನೆಯಿಂದಲೇ ಅಲ್ಲಿ ಮರ ಇಲ್ಲ, ಕೋತಿ ಇಲ್ಲ ಎಂದೆಲ್ಲ ಮಾತನಾಡಿಕೊಳ್ಳುತ್ತಾರೆ. ಹಾಗೆಯೇ ಗೇಟು ಹಾಕಿಕೊಂಡು ಹೊರ ಬರುತ್ತಾರೆ. ಕಾವಲುಗಾರ ನಿದ್ದೆ ಹೊಡೆಯುತ್ತಿದ್ದಾನೆ.)



ರಾಜ : ನಾವು ಅಂದುಕೊಂಡಂತೇ ಆಗಿದೆ. ಅಲ್ಲಿ ಮರ ಇಲ್ಲ. ಮರದ ಹಾಗೆಯೇ ಇರೋ ಏನೋ ಒಂದನ್ನ ನಿಲ್ಸಿದಾರೆ.

ಸುಧಾ : ಹೌದು, ಹೌದು.

ರಾಜ : ಆವತ್ತು ಮರ ಕಡಿಯುವವನನ್ನು ನಾವು ಮರ ಕಡೀಬೇಡ ಅಂತ ಕೇಳಿಕೊಂಡಿದ್ವಿ.

ಸುಧಾ : ಹೌದು. ಮರ ಕಡಿಯೋದ್ರಿಂದ ಏನೆಲ್ಲ ನಷ್ಟ ಆಗುತ್ತೆ ಅಂತ ಹೇಳಿದ್ವಿ.

ಅನಿಲ : ಅವನೂ ನಮ್ಮ ಮಾತನ್ನು ಅರ್ಥಮಾಡಿಕೊಂಡಿದ್ದ.

ಅನಿತಾ : ಕೊಡಲಿ ಹಿಡಕೊಂಡು ಬಂದೋನು ಮರ ಕಡಿಯೋದಿಲ್ಲ ಅಂತ ಹೇಳಿ ಹೊರಟು ಹೋಗಿದ್ದ.

ರಾಜ : ಆದರೆ ಅಲ್ಲಿ ಈಗ ಮರ ಇಲ್ಲ.

ಸುಧಾ : ಹಕ್ಕಿ ಹಾಡು ಕೇಳಿ ಬರ್ತಾ ಇಲ್ಲ.

ಅನಿಲ : ಕೋತಿ ಅಳಿಲುಗಳು ಕಾಣೆಯಾಗಿವೆ.

ರಾಜ : ಇದು ಮರ ಕಡಿಯೋಕೆ ಬಂದವನ ಕೆಲಸ ಅಲ್ಲ.

ಸುಧಾ : ಹೌದು, ಬೇರೆ ಯಾರೋ ಈ ಕೆಲಸಾನ ಮಾಡಿದಾರೆ.

ಅನಿಲ : ಯಾರು ಹಾಗಾದ್ರೆ?

ಅನಿತಾ : ಅಂಥಾ ಒಳ್ಳೇ ಮರಾನ ಕದ್ದು, ಕಡಿದು ಸಾಗಿಸಿದೋರು ಯಾರು ಹಾಗಾದ್ರೆ?

ರಾಜ : ನಾವು ಇದನ್ನ ಕಂಡುಹಿಡೀಬೇಕು.

ಸುಧಾ : ಎಂಥಾ ಮರ ಅಲ್ವ? ಸಾವಿರ ಕೈಗಳ ನಟರಾಜ!

ಅನಿಲ : ರೆಂಬೆ ಕೊಂಬೆಗಳಲ್ಲಿ ನೂರಾರು ಹಕ್ಕಿಗಳು!

ಅನಿತಾ : ಟೀಚರ್ ಹೇಳಿದ ಹಾಗೆ ನೂರಾರು ವರ್ಷಗಳಿಂದ ನೀರು, ಗೊಬ್ಬರ, ಸೂರ್ಯ ರಶ್ಮಿ, ಗಾಳಿಯಿಂದ ತನಗೆ ಬೇಕಾಗಿದ್ದನ್ನು ತೆಗೆದುಕೊಂಡು ಬೆಳೆದು ನಿಂತ ಮರ.....

ರಾಜ : ನಾವು ಬೇಸಿಗೆ ರಜ ಮುಗಿಸಿಕೊಂಡು ಬರುವಷ್ಟರಲ್ಲಿ ಮಾಯ!

ಸುಧಾ : ಮರದ ಹಾಗೇನೇ ಇರೋ ಒಂದು ಭೂತಾನ ಅಲ್ಲಿ ನಿಲ್ಲಿಸಿದ್ದಾರೆ!

ಅನಿಲ : ಮರ ಮಾಯ! ಬೇಲಿ ಇದ್ದೂ ಮಾಯ. ಕಾವಲುಗಾರನಿದ್ದೂ ಮಾಯ.

ರಾಜ : ಮುಂದೆ ಏನು ಮಾಡೋದು?

ಸುಧಾ : ಆವತ್ತು ಪ್ರಕೃತಿ ಪಾಠ ಮಾಡಿಕೊಂಡು ಮರದ ಮಹತ್ವಾನ ನಮಗೆ ತಿಳಿಸಿ ಹೇಳಿದ್ರಲ್ಲ, ನಮ್ಮ ಟೀಚರ್ರು, ಅವರಿಗೆ ವಿಷಯ ತಿಳಿಸೋಣ ಬನ್ನಿ.

(ನಾಲ್ವರೂ ನಿರ್ಗಮಿಸುವರು. ಕಾವಲುಗಾರ ನಿದ್ದೆ ತಿಳಿದು ಗಾಬರಿಯಿಂದ ಎಚ್ಚೆತ್ತು ತನ್ನ

ಕೆಲಸ ಮುಂದುವರಿಸುವನು.)

(ಶಿಕ್ಷಕಿ ಮಕ್ಕಳ ಜತೆ ಪ್ರವೇಶ.)

ಶಿಕ್ಷಕಿ : ಸುಧಾ, ಅನಿತ, ಮರ ಇದೆಯಲ್ಲ.

ಸುಧಾ : ಅದು ಮರ ಅಲ್ಲ, ಟೀಚರ್. ದೂರದಿಂದ ಹಾಗೆ ಕಾಣುತ್ತೆ. ಹತ್ರ ಹೋದರೆ ಗುಟ್ಟು ರಟ್ಟಾಗುತ್ತೆ.

ಅನಿತಾ : ಹತ್ರ ಹೋಗಬಾರದು ಅಂತ ಬೇಲಿ ಹಾಕಿದಾರೆ. ವಾಚ್‌ಮನ್ ಕೂರ್‍ಸಿದಾರೆ.

ಟೀಚರ್ : ಹಾಗೆಲ್ಲ ಮಾತನಾಡಬಾರದು. ಊರಲ್ಲಿರೋ ಮರಗಳೆಲ್ಲ ಮಾಯವಾಗಿ ಹೋಗಿದ್ದರಿಂದ, ಇದಾದರೂ ಉಳೀಲಿ ಅಂತಾ ಈ ವ್ಯವಸ್ಥೆ ಮಾಡಿದಾರೆ.

ಅನಿಲ : ಅಯ್ಯೋ, ಅಲ್ಲಿ ಮರ ಇಲ್ಲ ಟೀಚರ್. ಅಲ್ಲಿದ್ದ ಮರಾನ ಯಾರೋ ಕಡಿದು ಸಾಗಿಸಿಬಿಟ್ಟಿದ್ದಾರೆ.

ರಾಜ : ಜನರ ಕಣ್ಣಿಗೆ ಮಂಕುಬೂದಿ ಎರಚಲಿಕ್ಕೆ ಹೀಗೆ ಮಾಡಿದಾರೆ.

ಟೀಚರ್ : ಸಾಕು ಭಾಳ ಮಾತು ಕಲಿತಿದ್ದೀರಾ ನೀವು. ನಾನೇ ಇಲ್ಲಿಂದ ನೋಡ್ತಿದ್ದೀನಲ್ಲಾ. ಅದು ಮರ ಅಲ್ವೇ?

ಸುಧಾ : ನಾವು ಒಳಗೆ ಹೋಗಿ.....



ಟೀಚರ್ : ಮುಚ್ಚು ಬಾಯಿ. ಇದು ನಿನಗೆ ಸಂಬಂಧಪಟ್ಟ ವಿಷಯ ಅಲ್ಲ. ಈ ತಲೆಹರಟೆ ಯಾಕೆ? ಎಲ್ಲ ಶಾಲೆಗೆ ಬನ್ನಿ. ಹುಂ...

(ಟೀಚರ್ ಸಿಟ್ಟಿನಿಂದ ಹೋಗುವರು. ಮಕ್ಕಳು ಪೆಚ್ಚಾಗಿ ನಿಲ್ಲುವರು.)

ಸುಧಾ : ಇದು ನಮಗಾಗಿ ಮಾಡಿರೋ ವ್ಯವಸ್ಥೆ ಅಂತೆ.

ರಾಜ : ಮರ ಇದೆ ಅಂತ ಅವರು ಹೇಳಿದರೆ ನಾವು ನಂಬಬೇಕಂತೆ.

ಅನಿಲ : ಈಗ ನಾವು ಸುಳ್ಳುಬುರುಕರಾಗಿ ಬಿಟ್ವಿ.

ಅನಿತಾ : ಅಂದ್ರೆ ನಾವು ಹತ್ರ ಹೋಗಿ ನೋಡಿದ್ದೇ ಸುಳ್ಳಾಯ್ತು.

ಸುಧಾ : ಕಣ್ಣಾರೆ ಕಂಡಿದ್ದಕ್ಕೆ ಬೆಲೆ ಇಲ್ಲ ಅಂತ ಆಯ್ತು.

ರಾಜ : ಅಬ್ಬ, ಎಂಥಾ ಮೋಸ!

ಅನಿಲ : ಯಾರೋ ಟೀಚರ್ ಕಣ್ಣಿಗೂ ಮಂಕುಬೂದಿ ಎರಚಿದ್ದಾರೆ.

(ಎಲ್ಲರೂ ಬೇಸರದಿಂದ ನಿಲ್ಲುವರು. ಯೋಚಿಸುವರು.)

ರಾಜ : ಬನ್ನಿ. ನಾವು ಸೋಲಬಾರದು. ಶಾಲೇಲಿರೋ ಎಲ್ಲ ಮಕ್ಕಳಿಗೆ ಈ ವಿಷಯ ತಿಳಿಸೋಣ.

ಉಳಿದವರು : ನಡೀರಿ, ನಡೀರಿ.

(ಎಲ್ಲ ಮಕ್ಕಳ ನಿರ್ಗಮನ. ಇದನ್ನೆಲ್ಲ ಗಮನಿಸುತ್ತಿದ್ದ ಕಾವಲುಗಾರ ಚುರುಕಾಗುವನು. ಗೇಟಿಗೆ ದೊಡ್ಡ ಸರಪಳಿ ಬಿಗಿದು ಬೀಗ ಹಾಕುವನು. ಬಂದೂಕನ್ನು ಹೆಗಲಿಗೆ ಏರಿಸಿ ಮತ್ತೂ ವೇಗವಾಗಿ ಗಸ್ತು ತಿರುಗುವನು. ಹಿಂಬದಿಯಿಂದ ಮಕ್ಕಳ ಘೋಷಣೆ ಹತ್ತಿರ ಹತ್ತಿರವಾಗುವುದು. ಕಾವಲುಗಾರ ಮತ್ತೂ ಬಿರುಸಿನಿಂದ ಗಸ್ತು ಹಾಕುವನು. ಸಾಲು ಸಾಲಾಗಿ ಮಕ್ಕಳ ಆಗಮನ. ಅವರ ಕೈಯಲ್ಲಿ ಬಟ್ಟೆ ಬೋರ್ಡ್‌ಗಳು ಬೇರೆ ಇವೆ.)

ರಾಜ : ಅನ್ಯಾಯ...ವಂಚನೆ.

ಮಕ್ಕಳು : ಅನ್ಯಾಯ...ವಂಚನೆ.

ರಾಜ : ಅನ್ಯಾಯ...ಅನ್ಯಾಯ.

ಮಕ್ಕಳು : ವಂಚನೆ..ವಂಚನೆ.

(ಮಕ್ಕಳ ಗದ್ದಲ, ಕೂಗು ಹೆಚ್ಚಾದಾಗ ಊರ ಜನ, ಶಿಕ್ಷಕಿ, ಊರಿನ ಯಜಮಾನಪ್ಪ ಈ ಮೂವರು ಹಿರಿಯರು ಧಾವಿಸಿ ಬರುವರು. ಇವರ ನಡುವೆ ಮರ ಕಡಿಯುವವನೂ ಇದ್ದಾನೆ.)

ಯಜಮಾನಪ್ಪ : ಮಕ್ಕಳೆ, ಓದೋದನ್ನು ಬಿಟ್ಟು ಇದೇನು ನಡೆಸಿದ್ದೀರಾ ನೀವು? ಛೇ ಛೇ ಛೇ!

ಶಿಕ್ಷಕಿ : ನನ್ನ ಮಾತು ಮೀರಿಯೂ ನೀವು ಗಲಾಟೆ ಮಾಡತಿದೀರಾ.

(ಮಕ್ಕಳು ಅದೇ ಹಿಂದಿನ ಘೋಷಣೆ ಕೂಗುವರು.)

ಯಜಮಾನಪ್ಪ : ಮಕ್ಕಳೇ ಹೇಳಿ, ಶಾಲೆಗೆ ಶಿಕ್ಷಕರು ಬರ್ತಾ ಇಲ್ವೆ? ಪಾಠಗಳು ನಡೀತಾ ಇಲ್ವೆ? ಏನು ತೊಂದ್ರೆ?

ರಾಜ : ಅದಲ್ಲ ವಿಷಯ.

ಯಜಮಾನಪ್ಪ : ಮತ್ತೆ?

ಅನಿತಾ : ವಿಷಯ ಈ ಮರಕ್ಕೆ ಸಂಬಂಧಪಟ್ಟದ್ದು.

ಯಜಮಾನಪ್ಪ : ಏನಾಗಿದೆ ಈ ಮರಕ್ಕೆ? ಸೊಗಸಾಗಿದೆ. ಲಕ್ಷಣವಾಗಿದೆ. ಊರಲ್ಲಿರೋ ಎಲ್ಲ ಮರಗಳೂ ಹೋದ್ವು. ಆದರೆ ಈ ಮರ ಉಳಕೊಂಡಿದೆ.

ಮಕ್ಕಳು : ಸುಳ್ಳು–ಸುಳ್ಳು.



ಯಜಮಾನಪ್ಪ : ಸುಳ್ಳು! ಮರದ ಸುತ್ತ ಬೇಲಿ ಹಾಕ್ಸಿದೀವಿ. ಒಬ್ಬ ಕಾವಲುಗಾರನನ್ನು ನೇಮಿಸಿದೀವಿ.

ಸುಧಾ : ಬೇಲಿ ಇದೆ. ಕಾವಲುಗಾರ ಇದಾನೆ.

ಅನಿತಾ : ಮರ ಇಲ್ಲ.

ಯಜಮಾನಪ್ಪ : ಹಾಗೆಲ್ಲ ಮಾತನಾಡಬೇಡ ಮಗು. ಕಣ್ಣಿಗೆ ಕಾಣೋ ಹಾಗೆ ಸೊಂಪಾಗಿ ಬೆಳೆದು ನಿಂತಿರೋ ಮರ ಇಲ್ವೆ?

ರಾಜ : ಸುಳ್ಳು, ಸುಳ್ಳು. ಹೇಳಿ ಎಲ್ಲ, ವಂಚನೆ ವಂಚನೆ.

ಮಕ್ಕಳು : ವಂಚನೆ ವಂಚನೆ.

ಶಿಕ್ಷಕಿ : ಸೈಲೆನ್ಸ್. ನೀವು ಹಿರಿಯರ ಮಾತನ್ನ ಗೌರವಿಸೋ ರೀತಿ ಇದಲ್ಲ. ನೀವು ಅವರ ಮಾತಿಗೆ ಬೆಲೆ ಕೊಡಬೇಕು.

ಸುಧಾ : ಅವರು ಸುಳ್ಳು ಹೇಳ್ತಿದ್ದಾರೆ.

ಯಜಮಾನಪ್ಪ : ನಾನು ಸುಳ್ಳು ಹೇಳ್ತಿಲ್ಲ. ಅಲ್ಲೆ ಮರ ಇದೆ. ನೂರು ರೆಂಬೆ ಕೊಂಬೆ ಹೊತ್ತು ನಿಂತಿರೋ ಮರ.

(ಯಜಮಾನಪ್ಪ ಮಾತನಾಡುತ್ತಿರಲು ಮರದ ಬಳಿ ಏನೋ ಸದ್ದಾಗಿ ಮರ ನಿಧಾನವಾಗಿ ನೆಲಕ್ಕೆ ಒರಗುತ್ತದೆ. ಮಕ್ಕಳು ಹೋ ಎಂದು ಕೂಗಿಕೊಳ್ಳುತ್ತವೆ.)

ಯಜಮಾನಪ್ಪ : ಮರ....ಅಲ್ಲ......ಮರದ ಹಾಗಿರೋ ಗೊಂಬೆ! ದೇವರೇ ಇದು ಹೇಗಾಯ್ತು? ಭಾರೀ ಮರ ಗೊಂಬೆ ಹೇಗಾಯ್ತು?

ಶಿಕ್ಷಕಿ : ನಾನೇ ಈ ಮರದ ಕೆಳಗೆ ಪ್ರಕೃತಿ ಪಾಠ ಮಾಡಿದ್ದೆ. ಈಗ ಮರ ಎಲ್ಲಿ ಹೋಯ್ತು?

ಸುಧಾ : ತಾತ, ಇನ್ನಾದರೂ ನಮ್ಮ ಮಾತಿನಲ್ಲಿ ನಂಬಿಕೆ ಬಂತಲ್ಲ.

ಯಜಮಾನಪ್ಪ : ತಪ್ಪಾಯ್ತು ಮಗು. ಮಕ್ಕಳೇ, ಏನೋ ತಪ್ಪಾಗಿದೆ. ವಂಚನೆ ಆಗಿದೆ. ಇದು ಹೇಗಾಯ್ತು?

ಶಿಕ್ಷಕಿ : ನಿರ್ಮಲ ಗಾಳಿ ಕೊಡೋ ಮರ, ತಂಪು ನೆರಳು ನೀಡೋ ಮರ. ಹಕ್ಕಿಪಕ್ಕಿಗಳಿಗೆ ಆಶ್ರಯ ನೀಡಿದ್ದ ಮರ ಎಲ್ಲಿ ಹೋಯ್ತು?

ಜನ : ಎಲ್ಲಿ ಹೋಯ್ತು? ಈ ಅನ್ಯಾಯ ಮಾಡಿದೋರು ಯಾರು?

ಯಜಮಾನಪ್ಪ : ಪ್ರಕೃತೀನ ನಾಶ ಮಾಡುವವರು ಕೊಲೆಗಾರರು. ಅವರಿಗೆ ರಕ್ಷಣೆ ಇಲ್ಲ.....ಅವರಿಗೆ ಶಿಕ್ಷೆ ಆಗಲೇಬೇಕು.....

(ಜನರ ಗುಂಪಿನಿಂದ ಆಗ ಮರ ಕಡಿಯುವವ ಮುಂದೆ ಬರುವನು.)

ಮರ ಕಡಿಯುವವ : ಸ್ವಾಮಿ, ಅವರು ಯಾರು ಅನ್ನೋದನ್ನ ನಾನು ಬಲ್ಲೆ.



ಯಜಮಾನಪ್ಪ : ಯಾರು ಹೇಳು?

ಮರ ಕಡಿಯುವವ : ನಾನು ಹಿಂದೆ ಮರ ಕಡಿದು ಮಾರಿ ಬದುಕುತಿದ್ದೆ. ಈ ಮಕ್ಕಳು ಹೇಳಿದ ಮೇಲೆ ಮರ ಕಡಿಯೋದನ್ನು ಬಿಟ್ಟು ಈಗ ಹಾಲು ಮಾರಿಕೊಂಡು ಬದುಕಿದ್ದೀನಿ. ಈಗ ಎರಡು ತಿಂಗಳ ಹಿಂದೆ ನಾಲ್ಕು ಜನ ನನ್ನ ಹತ್ತಿರ ಬಂದರು. ಈ ಮರ ಕಡೀಬೇಕು ಅಂದ್ರು. ನಾನು ಆ ಪಾಪ ಕಾರ್ಯ ನನ್ನಿಂದ ಆಗಲ್ಲ ಅಂದೆ. ಆ ಜನ ಇಲ್ಲೇ ಇದಾರೆ.

(ಗುಂಪಿನಲ್ಲಿ ಗಡಿಬಿಡಿ. ಮೂವರು ಹಿರಿಯರು ಕಾವಲುಗಾರನನ್ನು ಕರೆದುಕೊಂಡು ಅಲ್ಲಿಂದ ತಪ್ಪಿಸಿಕೊಂಡು ಹೋಗಲು ನೋಡುವರು. ಮರ ಕಡಿಯುವವ, ಮಕ್ಕಳು ಸೇರಿ ಅವರನ್ನು ಹಿಡಿದು ತಂದು ಯಜಮಾನಪ್ಪನ ಮುಂದೆ ನಿಲ್ಲಿಸುವರು.)

ಯಜಮಾನಪ್ಪ : ಇವರು ...... ನಮ್ಮ ಊರಿನ ಹಿರಿಯರು.

ಮರ ಕಡಿಯುವವ : ಇವರನ್ನೇ ಕೇಳಿ ಸ್ವಾಮಿ, ಮರ ಏನಾಯ್ತು ಅಂತಾ.



ಯಜಮಾನಪ್ಪ : ಹೇಳಿ, ಏನಾಯ್ತು?

ಹಿರಿಯ 1 : ಈಗ ಎರಡು ತಿಂಗಳ ಹಿಂದೆ ನಾವು ಮೂವರೂ ವಾಯುವಿಹಾರಕ್ಕೆ ಅಂತಾ ಈ ಕಡೆ ಬಂದಿದ್ವಿ.

ಹಿರಿಯ 2 : ಆವಾಗ ಇಲ್ಲಿ ಒಂದು ಮರ ಸೊಂಪಾಗಿ ಬೆಳೆದು ನಿಂತಿತ್ತು. ಊರಲ್ಲಿರೋ ಮರಗಳೆಲ್ಲ ಕಳುವಾಗ್ತಿರೋವಾಗ ಇದೊಂದು ನಿಂತಿದೆಯಲ್ಲ ಅಂತಾ ನಾವು ಮಾತಾಡಿಕೊಂಡ್ವಿ.

ಹಿರಿಯ 1 : ಮರಾನ ಕಡಿದು ಮಾರಿದ್ರೆ ಒಳ್ಳೇ ಹಣ ಬರತ್ತೆ ಅನ್ನೋ ಮಾತೂ ಬಂತು:

ಹಿರಿಯ 3 : ನಾವು ಈ ಬಗ್ಗೆ ಒಂದು ಪ್ಲ್ಯಾನ್ ಕೂಡ ಮಾಡಿದ್ವಿ.

ಹಿರಿಯ 2 : ಅಷ್ಟರಲ್ಲಿ ಸರ್ಕಾರ ಮರಾನ ಕಾಯಲಿಕ್ಕೆ ಅಂತ ಈ ಕಾವಲುಗಾರನನ್ನು ನೇಮಿಸಿ ಮರದ ಸುತ್ತ ಬೇಲಿ ಹಾಕ್ತು.

ಹಿರಿಯ 1 : ಇದರಿಂದ ನಮಗೆ ಅನುಕೂಲ ಆಯ್ತು. ಹ್ಯಾಗೂ ಕಾವಲುಗಾರ ಇರತಾನೆ. ಜನ ಹತ್ರ ಹೋಗೋದಿಲ್ಲ. ಮರ ಇರಲೇ ಬೇಕು ಅಂತಾ ಏನು? ಅಂತ ಯೋಚನೆ ಮಾಡಿದ್ವಿ.

ಹಿರಿಯ 1 : ಸರಿ, ಮರ ಕಡೀಲಿಕ್ಕೆ ಬಾ ಅಂತ ಮೊದಲು ಇವನನ್ನು ಕರೆದ್ವಿ. ಇವನು ಬರಲಿಲ್ಲ. ಬೇರೆ ಜನ ಸಿಕ್ರು.

ಹಿರಿಯ 3 : ಜನರಿಗೆ ಅನುಮಾನ ಬಾರದಿರಲಿ ಅಂತ ಮರದ ಹಾಗೇ ಇದ್ದ ಈ ಬೊಂಬೇನ ತಂದು ಇಲ್ಲಿ ನಿಲ್ಸಿದ್ವಿ.

ಕಾವಲುಗಾರ : ನನಗಿಲ್ಲಿ ಮರ ಕಾಯೋ ಕೆಲಸ ಸಿಕ್ಕಿತಲ್ಲ. ನಾನೂ ಇವರ ಜತೆ ಸೇರಿಕೊಂಡೆ. ಪ್ರತಿ ತಿಂಗಳೂ ಸಂಬಳ ಬರ್ತಿತ್ತು. ಮರ ಅಲ್ಲಿ ಇದೇ ಅಂತ ಹೇಳ್ತಾ ಯಾರನ್ನೂ ಒಳಗೆ ಬಿಡದೇ ಸುಳ್ಳನ್ನ ಈವರೆಗೆ ಕಾಪಾಡಿಕೊಂಡು ಬಂದೆ. ಆದರೆ ಈ ಮಕ್ಕಳು......

ಶಿಕ್ಷಕಿ : ಛೇ, ಎಂಥಾ ಕೆಲಸ ಮಾಡಿದ್ರಿ. ಒಂದು ಮರ ಹೋದ್ರೆ ನೂರು ಅನಾಹುತಗಳು ಆಗುತ್ವೆ. ಗಾಳಿ ವಿಷ ಆಗುತ್ತೆ. ಮಳೆ ಕಡಿಮೆ ಆಗುತ್ತೆ. ಮಕ್ಕಳ ಮನಸ್ಸಿಗೆ ನೋವಾಗುತ್ತೆ. ಈ ಮಲೆನಾಡು ಮರುಭೂಮಿಯಾಗುತ್ತೆ.

ಯಜಮಾನಪ್ಪ : ನೀವು ಜನರಿಗೆ ಮೋಸ ಮಾಡಿದ್ರಿ. ಮಹಾನ್ ವೃಕ್ಷವೊಂದನ್ನು ಕೊಂದು ಹಾಕಿದ್ರಿ, ತಿಂದು ಹಾಕಿದ್ರಿ. ನಿಮಗೆ ಶಿಕ್ಷೆ ಆಗಲೇಬೇಕು.

ಜನ : ಹೌದು, ನಾಲ್ವರಿಗೂ ಶಿಕ್ಷೆ ವಿಧಿಸಿ.

ಯಜಮಾನಪ್ಪ : ಹೇಳಿ ಮಕ್ಕಳೇ, ನೀವೇ ಹೇಳಿ – ಇವರಿಗೆ ಏನು ಶಿಕ್ಷೆ ವಿಧಿಸೋಣ?

ರಾಜ, ಸುಧಾ : ಕಡಿದ ಮರದ ಜಾಗದಲಿ ನೂರು ಮರ ಬೆಳೆಸೋ ಶಿಕ್ಷೆ ಕೊಡಿ.



ಜನ : ಹೌದು, ಹೌದು. ನೂರು ಮರ ಬೆಳೆಸೋ ಶಿಕ್ಷೆ.

ಯಜಮಾನಪ್ಪ : ಬಹಳ ಒಳ್ಳೆಯ ವಿಚಾರ. ನಿಮಗೆ ಶಿಕ್ಷೆ ಮರಣ ದಂಡನೆ ಅಲ್ಲ. ನೇಣುಗಂಬ ಏರೋದಲ್ಲ. ಈ ಮಕ್ಕಳು ಹೇಳಿದ ಹಾಗೆ ಒಂದು ಮರ ಕಡಿದದ್ದಕ್ಕೆ ನೂರು ಮರ ಬೆಳೆಸೋದೇ ನಿಮಗೆ ಶಿಕ್ಷೆ.

ಹಿರಿಯರು : (ತಲೆದೂಗಿ) ಆಯ್ತು. ನಾವು ಮಾಡಿದ ತಪ್ಪಿನ ಅರಿವು ನಮಗೆ ಆಗಿದೆ. ನಾವು ಈ ಕೆಲಸಾನ ಮಾಡ್ತೀವಿ.

ಯಜಮಾನಪ್ಪ : ಮಕ್ಕಳೇ, ನೀವೇ ನಮಗೆ ಪಾಠ ಹೇಳಿಕೊಟ್ಟಿರಿ. ನಮ್ಮ ಕಣ್ಣನ್ನು ತೆರೆಸಿದ್ರಿ.


ಶಿಕ್ಷಕ : ನನಗೂ ಸಂತೋಷ ಆಗಿದೆ. ನಾನೂ ನಿಮ್ಮಿಂದ ಪಾಠ ಕಲಿತೆ.

(ದೊಡ್ಡವರೆಲ್ಲ ಮಕ್ಕಳನ್ನು ಬಾಚಿ ತಬ್ಬಿಕೊಳ್ಳುವರು. ನಿಧಾನವಾಗಿ ಎಲ್ಲರೂ ನಿರ್ಗಮಿಸುವರು. ಮಂದ ಬೆಳಕಿನಲ್ಲಿ ಮೂವರೂ ಗುಂಡಿ ತೋಡುವುದು, ಕಾವಲುಗಾರ ನೀರು ತಂದು ಹಾಕುವುದು ಕಾಣಿಸುತ್ತದೆ. ಇವರ ನಡುವೆ ಕತೆ ಕೇಳುವ ಹುಡುಗನೂ ಕಾಣಿಸಿಕೊಳ್ಳುತ್ತಾನೆ.ಹಿನ್ನೆಲೆಯಲ್ಲಿ ಮಕ್ಕಳ ಹಾಡು ಕೇಳಿಬರುತ್ತದೆ.)

ಮರಗಿಡ ಬಳ್ಳಿಗು ನಮಗೂ ನಂಟು
ಪ್ರಾಣಿ ಪಕ್ಷಿಗೂ ಬಿದ್ದಿದೆ ಗಂಟು
ಪರಿಸರ ಉಳಿದರೆ ನಮ್ಮಯ ಉಳಿವು
ಇಲ್ಲದೆ ಹೋದರೆ ನಮ್ಮಯ ಅಳಿವು

– ತೆರೆ –

Printed at : First Impression, Noida



ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ

₹ 55.00
ISBN 812374550-8
9 788123 745503
21221758
Makkalu Needida Shikshe
(Kannada)